
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ-2018
ಬೆಲೆ ರೂ. 1



## ಬಂಡೆಗಳ ಉದ್ಯಾನವನದಲ್ಲೊಂದು ಜಲಧಾರೆ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 8
ಮೇ 2018, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ನೇರ ಮಾತು

ಅಭಿಮತದ ಈ ಸಂಚಿಕೆ ತಮ್ಮ ಕೈ ಸೇರುವ ಜತೆ ಜತೆಗೆ ನಮ್ಮ ರಾಜ್ಯದ ಚುನಾವಣೆ ಮುಗಿದಿರುತ್ತದೆ. ಹೊಸ ಸರ್ಕಾರ ರಚನೆಗೆ ಸಿದ್ಧತೆ ನಡೆದಿರುತ್ತದೆ. ಹೊಸ ಸರಕಾರದ ಕುರಿತು ನಮಗೆಲ್ಲಾ ಕುತೂಹಲ, ಆಸಕ್ತಿ ಮತ್ತು ಹಲವು ನಿರೀಕ್ಷೆ ಇರುವುದು ಸಹಜ. ವೈವಿಧ್ಯ ರಾಜಕೀಯ ಆಸಕ್ತಿಗಳಿಗೆ ಅನುಗುಣವಾಗಿ ಕೆಲವರಿಗೆ ಭಾಜಪ, ಕೆಲವರಿಗೆ ಕಾಂಗ್ರೆಸ್ ಇನ್ನು ಕೆಲವರಿಗೆ ಜನತಾದಳ ಸರ್ಕಾರ ರಚಿಸಬೇಕೆಂಬ ಹಂಬಲವಿರುವುದು ಸಾಮಾನ್ಯ.

ಅಂತೆಯೇ ರಾಜಕೀಯವಾಗಿ ಪಕ್ಷಾತೀತನಾಗಿರುವ ಮತ್ತು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿರುವ ಸಂದರ್ಭದಲ್ಲಿ ಹಲವು ನಿರೀಕ್ಷೆಗಳನ್ನು ನಾನೂ ಇರಿಸಿದ್ದೇನೆ. ಕರ್ನಾಟಕದಲ್ಲಿ ಬೇರೆ ಬೇರೆ ಸರಕಾರಗಳು ಅಸ್ತಿತ್ವದಲ್ಲಿದ್ದಾಗಲೆಲ್ಲಾ ಅವೆಲ್ಲವೂ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಾಗಿ ಧನ ಸಹಾಯವನ್ನು ನೀಡಿವೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರು ಒಂದು ಕೋಟಿ ರೂಪಾಯಿ, ಜೆ.ಡಿ.ಎಸ್. ಪಕ್ಷದ ಸರಕಾರ ಅಧಿಕಾರದಲ್ಲಿದ್ದಾಗ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಐವತ್ತು ಲಕ್ಷ ರೂಪಾಯಿ, ಭಾರತೀಯ ಜನತಾ ಪಕ್ಷದ ಸರಕಾರ ಅಧಿಕಾರದಲ್ಲಿದ್ದಾಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಒಂದು ಕೋಟಿ ರೂಪಾಯಿ ನೀಡಿದ್ದಾರೆ. ದೆಹಲಿಯ ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿಯಾಗಿದ್ದ ಶೀಲಾ ದೀಕ್ಷಿತ್ ಅವರು ಹೊಸ ಕಟ್ಟಡ ಕಟ್ಟಲು 25 ಲಕ್ಷ ರೂಪಾಯಿ ನೀಡಿದ್ದಾರೆ. ರಾಜ್ಯ ಸಭಾ ಸದಸ್ಯರಾಗಿದ್ದ ಡಾ.ಕಸ್ತೂರಿ ರಂಗನ್ ಸಂಘದ ಲಿಫ್ಟ್‌ಗಾಗಿ ರೂ. 15 ಲಕ್ಷ ದೇಣಿಗೆಯನ್ನು ತಮ್ಮ ಸಂಸದರ ನಿಧಿಯಿಂದ ನೀಡಿದ್ದಾರೆ. ಹಿಂದೆ ಸಂಘಕ್ಕೆ ಸ್ಥಳೀಯ ಆಡಳಿತವು ಮೂರು ಕೋಟಿ ಅರುವತ್ತೈದು ಲಕ್ಷ ರೂಪಾಯಿಗಳ ದಂಡ ವಿಧಿಸಿತ್ತು. ಆ ಸಂದರ್ಭ ಕೇಂದ್ರದ ನಗರಾಭಿವೃದ್ಧಿ ಸಚಿವರಾಗಿದ್ದ ಅನಂತಕುಮಾರ್ ಅವರು ಮೂರು ಕೋಟಿ ರೂಪಾಯಿ ಮನ್ನಾ ಮಾಡಿಸಿ ಕೇವಲ 65 ಲಕ್ಷ ರೂಪಾಯಿ ಕಟ್ಟುವಂತೆ ಮಾಡಿಸಿಕೊಟ್ಟರು. ಅದು ಆಗದೆ ಇರುತ್ತಿದ್ದರೆ ಸಂಘದ ಹೊಸ ಕಟ್ಟಡ ಬರುವುದು ಕನಸು ಮಾತ್ರ ಆಗಿರುತ್ತಿತ್ತೋ ಏನೋ? ದೆಹಲಿ ಕರ್ನಾಟಕ ಸಂಘದ ಬೇಡಿಕೆಯಂತೆ ಸಿದ್ಧರಾಮಯ್ಯ ಅವರ ಸರ್ಕಾರ ಐದು ಕೋಟಿ ರೂಪಾಯಿ ನೀಡಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಆರಂಭಿಸಿದೆ. ಇನ್ನೊಂದೆಡೆ ಸಂಘದ ಮನವಿಯನ್ನು ಮನ್ನಿಸಿ ಈ ಹಿಂದಿನ ಕೇಂದ್ರ ನಗರಾಭಿವೃದ್ಧಿ ಸಚಿವರಾದ ವೆಂಕಯ್ಯ ನಾಯ್ಡು ಅವರು ಸಂಘದ ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಅವರ ಹೆಸರನ್ನು ಇರಿಸಲು ತಮ್ಮ ಪ್ರಭಾವ ಬೀರಿದರು. ನನ್ನ ಅಧ್ಯಕ್ಷತೆಯ ಈ ಕಾರ್ಯಕಾರಿ ಸಮಿತಿಯ ಅವಧಿಯ ಪ್ರಥಮ ಮೂರು ವರ್ಷ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಪ್ರತಿವರ್ಷ 25 ಲಕ್ಷ ರೂಪಾಯಿಯನ್ನು ಸಿದ್ಧರಾಮಯ್ಯನವರ ಕರ್ನಾಟಕ ಸರ್ಕಾರ ನೀಡಿದೆ. ಕಳೆದ ವರ್ಷ 32 ಲಕ್ಷ ರೂಪಾಯಿಯನ್ನು ನೀಡಿದೆ.

ದೆಹಲಿ ಕರ್ನಾಟಕ ಸಂಘವನ್ನು ಆರಂಭದಲ್ಲಿ ಕಟ್ಟಿ ಬೆಳೆಸಿದ ಅಂದಿನ ಲೋಕಸಭೆಯ ಸಭಾಪತಿಗಳಾಗಿದ್ದ ಎಸ್.ವಿ. ಕೃಷ್ಣಮೂರ್ತಿರಾಯರು 1958–66ರಲ್ಲಿ ಸಂಘದ ಅಧ್ಯಕ್ಷರಾಗಿದ್ದರು. ನಂತರ ಕೇಂದ್ರ ಸಚಿವೆ ಡಾ. ಸರೋಜಿನಿ ಮಹಿಷಿ 1978–83ರಲ್ಲಿ ಸಂಘದ ಅಧ್ಯಕ್ಷರಾಗಿದ್ದಾಗ ಸಂಘಕ್ಕೆ ಜಾಗ ದೊರಕಿಸಿ ಕಟ್ಟಡವೊಂದನ್ನು ಕಟ್ಟಿದರು. ಸಂಘವನ್ನು ಟ್ರಸ್ಟ್ ಆಗಿ ಪರಿವರ್ತಿಸಲು ಹೊರಟಾಗ ಅದರ ವಿರುದ್ಧ ನಿಂತು ಹೋರಾಟ ಮಾಡಿದವರು ಮಾಜಿ ಕೇಂದ್ರ ಸಚಿವ ಜಿ.ವೈ. ಕೃಷ್ಣನ್ ಅವರು 1983–86ರಲ್ಲಿ ಸಂಘದ ಅಧ್ಯಕ್ಷರಾಗಿದ್ದರು.

ಸಂಘದ ಜೊತೆಗೆ ನಿರಂತರ ಸಕ್ರಿಯವಾಗಿ 1986–90ರವರೆಗೆ ಅಧ್ಯಕ್ಷರಾಗಿ ದುಡಿದ ಎಸ್. ಗೋಪಾಲ ಶಾಸ್ತ್ರಿ ಅವರು ಸೋಶಿಯಲಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಡಾ. ರಾಜೇಂದ್ರ ಪ್ರಸಾದ್, ಜಯಪ್ರಕಾಶ ನಾರಾಯಣರವರ ಕೈಕೆಳಗೆ ತರಬೇತಿ ಪಡೆದು ಅಖಿಲ ಭಾರತೀಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು.

ಸಂಘವನ್ನು ಸಾಂಸ್ಕೃತಿಕವಾಗಿ ಬೆಳೆಸಲು ಡಾ. ಜೀವರಾಜ ಆಳ್ವ ಅವರ ಮಾರ್ಗದರ್ಶನ ನಾವೆಂದೂ ಮರೆಯಲಾಗದು. ಹಾಗೆಯೇ ಮಾಜಿ ಕೇಂದ್ರ ಸಚಿವ ಆಸ್ಕರ್ ಫರ್ನಾಂಡೀಸ್ ದೆಹಲಿಗೆ ಬಂದ ನಂತರ ಇಂದಿನವರೆಗೆ ನಿರಂತರ ಸಂಘದೊಂದಿಗೆ ಸ್ಪಂದಿಸುವವರು. ಹೀಗೆ ನಮ್ಮ ಸಂಘಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಸರ್ಕಾರದ ಕೊಡುಗೆ ಸಿಕ್ಕಿದೆ. ಹೊಸ ಸರ್ಕಾರದಿಂದ ಹೊಸ ಆಯಾಮದಲ್ಲಿ ಕೆಲಸ ಮಾಡಲು ಮುಖ್ಯವಾಗಿ ಕನ್ನಡವನ್ನು ಕನ್ನಡೇತರರಿಗೆ ತಲುಪಿಸುವ ದೊಡ್ಡಯೋಜನೆಯನ್ನು ನಿರೀಕ್ಷಿಸುತ್ತೇವೆ. ಇದೀಗ ರಾಜ್ಯಸಭೆಗೆ ಕನ್ನಡ ಸಾಹಿತಿ, ಚಿಂತಕ, ಹೋರಾಟಗಾರ ಎಲ್. ಹನುಮಂತಯ್ಯ ಆಯ್ಕೆಯಾಗಿ ಬಂದಿದ್ದಾರೆ . ಮುಂದಿನ ದಿನಗಳಲ್ಲಿ ಕನ್ನಡದ ಕಹಳೆ ರಾಜಧಾನಿಯಲ್ಲಿ ಮೊಳಗಿಸುವ ಮುಕ್ತ ಅವಕಾಶ ಅವರಿಗಿದೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.
ಫೋನ್ : 9560653021/ 9560563203, 011–26109615 / 26104818

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಮೇ, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಮೇ, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 27 ಮೇ, 2018ರಂದು ಬೆಳಿಗ್ಗೆ 11 ಗಂಟೆಯಿಂದ.

## ಮುನ್ನೋಟ

ದೆಹಲಿಯಲ್ಲಿ ಬೇಸಿಗೆ ಪ್ರಾರಂಭವಾಗಿದೆ. ಮಕ್ಕಳ ಪರೀಕ್ಷೆಗಳು ಮುಗಿದಿವೆ. ಮುಖ್ಯವಾಗಿ 10 ಮತ್ತು 12 ನೇ ತರಗತಿಯ ಫಲಿತಾಂಶಗಳು ಬರುವ ಸಮಯದಲ್ಲಿ ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೆ ಶುಭಾಶಯವನ್ನು ಕೋರುತ್ತಾ, ಸಾಮಾನ್ಯವಾಗಿ ಮೇ ಮತ್ತು ಜೂನ್ ತಿಂಗಳ ಈ ದಿನಗಳಲ್ಲಿ ದೆಹಲಿಯ ಕನ್ನಡಿಗರು ತಮ್ಮ ತಮ್ಮ ಊರುಗಳಿಗೆ ಹೊರಡುವ ಸಂದರ್ಭ. ಹಾಗೆಯೇ ದೆಹಲಿ ಕರ್ನಾಟಕ ಸಂಘದಲ್ಲಿಯೂ ಸಹ ಬೇಸಿಗೆಯ ಈ ತಿಂಗಳಿನಲ್ಲಿ ಕಾರ್ಯಕ್ರಮಗಳೂ ಕೂಡಾ ಕಡಿಮೆ. ದೆಹಲಿ ಕರ್ನಾಟಕ ಸಂಘ ಪ್ರಕಟಿಸಿರುವ ಪುಸ್ತಕ "ಡಾ. ನಿರಂಜನ ಕೃತಿ ಸ್ಮೃತಿ"ಯ ಬಿಡುಗಡೆಯನ್ನು ಮೇ ತಿಂಗಳ ಕೊನೆಯ ವಾರದಲ್ಲಿ ಅಥವಾ ಜೂನ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಬಿಡುಗಡೆ ಮಾಡಲು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿರುವ ದೆಹಲಿ ಕರ್ನಾಟಕ ಸಂಘದ ಸದಸ್ಯರಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಿದೆ. ಈ ಕಾರ್ಯಕ್ರಮಕ್ಕೆ ರಾಜ್ಯದ ಗಣ್ಯ ಸಾಹಿತಿಗಳು, ಕಲಾವಿದರನ್ನು ಆಹ್ವಾನಿಸಲಾಗುವುದು. ಈ ಕಾರ್ಯಕ್ರಮಕ್ಕೆ ಸಭಾಂಗಣ ಮತ್ತು ಇತರ ಖರ್ಚು-ವೆಚ್ಚಗಳಿಗೆ ಪ್ರಾಯೋಜನೆಗಳನ್ನು ಮಾಡಿ ನಮ್ಮ ಕಾರ್ಯಕ್ರಮದ ಯಶಸ್ವಿಯಲ್ಲಿ ತಾವೆಲ್ಲರೂ ಪಾಲ್ಗೊಳ್ಳಬೇಕಾಗಿ ವಿನಂತಿ. ಸಾಂಸ್ಕೃತಿಕ ಕಾರ್ಯಕ್ರಮಗಳ ಕುರಿತಾಗಿ ಸಂಘದ ಸದಸ್ಯರಾಗಿರುವ ಶ್ರೀ ಟಿ.ಎಸ್. ರಮೇಶ್ (ಮೋ:9880188467) ಅವರನ್ನು ಸಂಪರ್ಕಿಸಬಹುದು.

ಕಳೆದ 22ರಂದು ಬಸವ ಜಯಂತಿ ಕಾರ್ಯಕ್ರಮವು ವಿಶೇಷವಾಗಿ ನಡೆಯಿತು. ಬಸವ ಇಂಟರ್ ನ್ಯಾಷನಲ್ ಫೌಂಡೇಶನ್, ಲಂಡನ್ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು, ಇದರ ಸಹಯೋಗದೊಂದಿಗೆ ಇಡೀ ದಿನ ನಡೆದ ಕಾರ್ಯಕ್ರಮದಲ್ಲಿ ಅನೇಕ ಸಾಹಿತಿಗಳು, ವಿದ್ವಾಂಸರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ವಿಶೇಷವಾಗಿ ಸಹಕರಿಸಿದ ಶ್ರೀ ಕೆ.ವಿ. ನಾಗರಾಜಮೂರ್ತಿ ಮತ್ತು ಪ್ರೇರೇಪಣೆ ನೀಡಿದ ಶ್ರೀ ಎನ್.ಪಿ.ಚಂದ್ರಶೇಖರ್ ಅವರಿಗೆ ವಿಶೇಷ ಧನ್ಯವಾದಗಳು. ಅ

***ಸಿ.ಎಂ.ನಾಗರಾಜ, ಪ್ರಧಾನ ಕಾರ್ಯದರ್ಶಿ***



# ಡಾ. ಭೀಮಭಟ್ ಅವರಿಂದ ಉಪನ್ಯಾಸ

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ ಡಾ. ಭೀಮ್ ಭಟ್ ಅವರಿಂದ "ಆಯುರ್ವೇದದಿಂದ ಆರೋಗ್ಯ" ಉಪನ್ಯಾಸ ಮಾಲಿಕೆಯಲ್ಲಿ 'ವೈಯಕ್ತಿಕ ಶಾರೀರಿಕ ಮತ್ತು ಮಾನಸಿಕ ಪ್ರಕೃತಿಯ' ಕುರಿತಾದ ಉಪನ್ಯಾಸ ಕಾರ್ಯಕ್ರಮವು ಇದೇ ಏಪ್ರಿಲ್ 29ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಜರುಗಿತು.

ಅತ್ಯಂತ ಮಹತ್ವಪೂರ್ಣವಾದ ಆರೋಗ್ಯದ ಕುರಿತು ಅರಿವನ್ನು ಮೂಡಿಸುವ ಮತ್ತು "ನಮ್ಮ ದೇಹ-ನಮ್ಮ ಆರೋಗ್ಯ" ಎಂಬ ಸತ್ಯದ ಅರಿವನ್ನು ತಿಳಿಯಪಡಿಸುವ ಮಹತ್ವದ ಕಾರ್ಯಕ್ರಮ ಇದಾಗಿತ್ತು.

ಆರೋಗ್ಯ ಉಪನ್ಯಾಸದಲ್ಲಿ 'ವಾತ-ಪಿತ್ತ-ಕಫ'ದ ಕುರಿತಾಗಿ ಸವಿವರವಾಗಿ ತಿಳಿಸಿಕೊಟ್ಟರು. ವಾತ-ಪಿತ್ತ-ಕಫ ಒಳಗೊಂಡಿರುವ ಜನರಲ್ಲಿ ಎಂತಹ ರೋಗದ ಲಕ್ಷಣಗಳು ಗೋಚರಿಸುತ್ತವೆ. ಇಂತಹ ರೋಗ ಲಕ್ಷಣದಿಂದ ಹರಡುವ ರೋಗಗಳ ಬಗ್ಗೆ ತಿಳಿಸಿಕೊಟ್ಟರು ಮತ್ತು ಅವುಗಳನ್ನು ರೋಗದ ಪ್ರಾಥಮಿಕ ಹಂತದಲ್ಲಿಯೇ ಹೇಗೆ ತಡೆಗಟ್ಟಬಹುದು ಎನ್ನುವ ಸೂಕ್ಷ್ಮತೆಗಳನ್ನು ಮನವರಿಕೆ ಮಾಡಿದರು. ವಾತ-ಪಿತ್ತ ಮತ್ತು ಕಫಾ ಇರುವವರು ಎಂತಹ ಆಹಾರ ಕ್ರಮ ಅನುಸರಿಸಬೇಕು. ಯಾವ ರೀತಿಯಾಗಿ ರೋಗ ಬರದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎನ್ನುವ ಬಗ್ಗೆ ಉಪನ್ಯಾಸ ಇರುವುದಾಗಿ ತಿಳಿಸಿದರು.

ನಾನು ಅಂದುಕೊಂಡಿದ್ದ ಕಲ್ಪನೆಯೇ ಬೇರೆ, ಅಲ್ಲಿನ ದೃಶ್ಯವೇ ಬೇರೆಯಾಗಿತ್ತು. ಇಂದಿನ ಒತ್ತಡದ ಜೀವನದಲ್ಲಿ ಸಾಮಾನ್ಯವಾಗಿ ಆರೋಗ್ಯ ಸಮಸ್ಯೆ ಇದ್ದೇ ಇರುತ್ತದೆ. ತುಂಬಾ ಜನ ಬಂದಿರುತ್ತಾರೆ ಅನ್ನುವ ಕಲ್ಪನೆ ನನ್ನದಾಗಿತ್ತು. ಆದರೆ, ಅದು ಹುಸಿಯಾಗಿತ್ತು. ನನಗೆ ಆಶ್ಚರ್ಯದ ಜೊತೆಗೆ ನೋವು, ಏಕೆಂದರೆ, ಕಾರ್ಯಕ್ರಮದ ನಂತರ ಹೊರನಾಡಿನ ಕನ್ನಡಿಗರೆಲ್ಲರೂ ನಾವು ಎಂತಹ ಸುವರ್ಣ ಕಾಲಾವಕಾಶವನ್ನು ಕಳೆದುಕೊಳ್ಳುತ್ತೇವೆ ಎಂಬುದರ ಕುರಿತಾಗಿ ಆರೋಗ್ಯದ ಬಗ್ಗೆ ಅವರ ಕಳ-ಕಳಿಯಾಗಿತ್ತು.

ಒಬ್ಬ ಹಿರಿಯ ವೈದ್ಯರು ತಮ್ಮೆಲ್ಲಾ ಅಮೂಲ್ಯವಾದ ಕೆಲಸ ಕಾರ್ಯಗಳನ್ನು ಬಿಟ್ಟು ಇಡೀ ದಿನ ಜನ ಸೇವೆಗಾಗಿ ಸಮಯ ವಿನಿಯೋಗಿಸಿದಾಗ ಇಂತಹ ಸದಾವಕಾಶವನ್ನು ನಾವು ಉಪಯೋಗಿಸಿಕೊಳ್ಳದೇ ಇರುವುದು ನಮ್ಮ ದೌರ್ಭಾಗ್ಯವೆ ಸರಿ ಎಂದು ನನಗನಿಸಿತು.

ಆರೋಗ್ಯ ಉಪನ್ಯಾಸ ಮಾಲಿಕೆ ಕಾರ್ಯಕ್ರಮ ಹಮ್ಮಿಕೊಳ್ಳುವ ಮುಂಬರುವ ಕಾರ್ಯಕ್ರಮಕ್ಕೆ ನಾವೆಲ್ಲರೂ ತಪ್ಪದೇ ಬರುವುದರ ಜೊತೆಗೆ ಮಕ್ಕಳನ್ನು ಕರೆದುಕೊಂಡು ಬರುವುದು ಅಗತ್ಯ ಎನಿಸಿತು. ಮಕ್ಕಳಿಗೆ ತುಂಬಾ ಅಮೂಲ್ಯವಾದ ಕಾರ್ಯಕ್ರಮ ಇದಾಗಿರುತ್ತದೆ. ಕಾರಣ ಯಾವುದೇ ರೋಗವನ್ನು ಮೂಲದಿಂದಲೇ ತೆಗೆದು ಹಾಕಿದರೆ "ತಾಗುವ ಮುನ್ನ ಬಾಗುವ ತಲೆ ಲೇಸು" ಎಂಬ ಸೂಕ್ತಿಯಂತೆ, ರೋಗದ ಪ್ರಾಥಮಿಕ ಹಂತದಲ್ಲಿಯೇ ರೋಗದ ಲಕ್ಷಣ ಕಂಡು ಹಿಡಿದು ಸೂಕ್ತ ಚಿಕಿತ್ಸೆ ಮಾಡುವುದರಿಂದ ರೋಗ ಮುಕ್ತ ಜೀವನ ನಡೆಸಲು ಹಾಗೂ ಸುಖ ಜೀವನಕ್ಕೆ ನಾಂದಿಯಾಗುವುದರಲ್ಲಿ ಸಂದೇಹವೆ ಇಲ್ಲ.

ಶ್ರೀ ಚಂದ್ರಶೇಖರ್ ಎನ್.ಪಿ. ಅವರು ಆರೋಗ್ಯ ಉಪನ್ಯಾಸ ಮಾಲಿಕೆ ಮೂರನೆಯ ಹಂತದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಮತಿ ಪೂಜಾ ರಾವ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಉಪನ್ಯಾಸ ಕಾರ್ಯಕ್ರಮದ ನಂತರ ಡಾ. ಭೀಮ್ ಭಟ್ ಅವರು ಉಚಿತ ಆರೋಗ್ಯ ತಪಾಸಣೆ ನಡೆಸಿದರು. ಅ

***ಎಸ್. ಕುಮಾರ್***

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 8
ಮೇ 2018

ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಚುನಾವಣಾ ಪ್ರಣಾಳಿಕೆಗಳು ದೂರಾಲೋಚನೆಯಿಂದ ಕೂಡಿರಬೇಕು

ಬಿಸಿಲಿನ ಝಳ ಒಂದೆಡೆಯಾದರೆ ಮಳೆಯ ಮೋಡವೂ ಇನ್ನೊಂದೆಡೆ ಕಾಣಿಸಿಕೊಳ್ಳುತ್ತಿದೆ. ಇಂತಹ ಹವಾಮಾನ ಪರಿಸ್ಥಿತಿಯನ್ನು ದೇಶದ ಉದ್ದಗಲದಲ್ಲಿ ಕಾಣಬಹುದು. ಆದರೆ ನಮ್ಮ ನಾಡಿನಲ್ಲಿ ಮಾತ್ರ ಚುನಾವಣೆಯ ದಗೆಯ ಜೊತೆಗೆ ಆಶ್ವಾಸನೆಗಳ ಸುರಿಮಳೆಯೂ ಸುರಿಯುತ್ತಿದೆ. ಕಾರಣ ರಾಜ್ಯದ ಚುನಾವಣೆ.

ಪ್ರಜಾತಾಂತ್ರಿಕ ಆಡಳಿತ ವ್ಯವಸ್ಥೆಯಲ್ಲಿ ನಿಗದಿತ ವೇಳೆಯಲ್ಲಿ ನಡೆಯುವ ಚುನಾವಣೆಗಳೇ ಪ್ರಜಾತಂತ್ರವನ್ನು ಜೀವಂತವಾಗಿರಿಸುವ ಸೂಚಕವಾಗಿವೆ. ಸ್ವಾತಂತ್ರ್ಯದ ನಂತರ ಹುಟ್ಟಿದ ತಲೆಮಾರಿನ ನಮ್ಮ ದೇಶದ ಜನರು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ನೈಜವಾಗಿ ತಮ್ಮದಾಗಿಸಿಕೊಂಡಿದ್ದಾರೆ. ವಿಶಾಲ ದೇಶದಲ್ಲಿರುವ ಭೌಗೋಳಿಕ, ಭಾಷೀಯ, ಸಾಂಸ್ಕೃತಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಭಿನ್ನತೆಗಳನ್ನು ಮೆಟ್ಟಿ ನಿಂತು ಪ್ರಜಾಪ್ರಭುತ್ವವು ಮೆರೆಯುತ್ತಿದೆ. ಅದರ ಮುಖ್ಯ ಬಿಂದುವೇ ಚುನಾವಣೆಯಾಗಿದೆ. ಚುನಾವಣೆಗಳು ಒಂದು ವೈಚಾರಿಕ ಧೋರಣೆಯ ರಾಜಕೀಯ ಶಕ್ತಿಗಳು ನಿರಂತರವಾಗಿ ಬಲಗೊಳ್ಳುವುದನ್ನು ತಡೆದ ಉದಾಹರಣೆಗಳು ನಮ್ಮ ದೇಶದಲ್ಲಿವೆ. ಜತೆಗೆ ಒಂದು ಸಿದ್ಧಾಂತವನ್ನು ನಿರಂತರವಾಗಿ ಬೆಂಬಲಿಸಿದನ್ನು ಕೂಡಾ ನಾವು ಕಾಣಬಹುದು.

ಚುನಾವಣೆಗಳು ನಡೆಯುತ್ತಿರುವಂತೆ ನಮ್ಮ ರಾಜಕೀಯ ಪಕ್ಷಗಳು ಮೌಲ್ಯಯುತವಾದ ರಾಜಕಾರಣದಿಂದ ದೂರ ಸರಿಯುತ್ತಿರುವುದು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೇಕ್ ಸುದ್ದಿಗಳನ್ನೇ ನಂಬಿ ತಮ್ಮ ರಾಜಕೀಯ ಒಲವನ್ನು ಬಲಗೊಳಿಸುವ ಪ್ರವೃತ್ತಿಯು ಸಾಮಾನ್ಯ ಪ್ರಜೆಗಳನ್ನು ರಾಜಕೀಯದ ಕುರಿತು ಭ್ರಮನಿರಸನಗೊಳಿಸುತ್ತಿವೆ. ರಾಜಕೀಯ ವೈಚಾರಿಕತೆಯನ್ನು ಬೆಳೆಸಿಕೊಳ್ಳಲು ನಾವು ಅಧ್ಯಯನ ಮಾಡುವ ಜತೆಗೆ ರಾಜಕೀಯ ನಿರ್ಣಯಗಳು ಮಾಡುವ ಪರಿಣಾಮಗಳು ಹೇಗಿರುತ್ತವೆ ಮತ್ತು ತಳಮಟ್ಟದಲ್ಲಿ ಯಾವ ತರದ ಬದಲಾವಣೆಗಳು ಆಗುತ್ತಿವೆ ಎಂಬುದನ್ನು ಮುಕ್ತ ಮನಸ್ಸಿನಿಂದ ಅರಿತುಕೊಳ್ಳಬೇಕಾಗಿದೆ.

ಮೌಲ್ಯಾಧಾರಿತ ರಾಜಕಾರಣವನ್ನು ಕಳೆದ ಶತಮಾನದ ಎಂಭತ್ತರ ದಶಕದಲ್ಲಿಯೇ ದೇಶಕ್ಕೆ ತೋರಿಸಿಕೊಟ್ಟ ರಾಜ್ಯ ನಮ್ಮದು. ಆದರೆ ರಾಜ್ಯದ ಚುನಾವಣೆಯ ಪ್ರಚಾರವು ಜನರನ್ನು ಮೂರ್ಖರೆಂದು ರಾಜಕೀಯ ಪಕ್ಷಗಳು ಪರಿಗಣಿಸಿದಂತೆ ಕಾಣುತ್ತದೆ. ಒಂದೆಡೆ ಆಡಳಿತ ಪಕ್ಷದ ಮಹತ್ವಾಕಾಂಕ್ಷೆಯಾದರೆ, ಇನ್ನೊಂದೆಡೆ ರಾಷ್ಟ್ರೀಯ ಮತ್ತು ಪ್ರಾದೇಶಿಕ ವಿರೋಧ ಪಕ್ಷಗಳು ಕೇವಲ ಅಧಿಕಾರವನ್ನು ಪಡೆಯುವತ್ತ ಮಾತ್ರ ಗಮನಹರಿಸಿವೆ. ಬಹಳ ತಡವಾಗಿ ಬಿಡುಗಡೆಗೊಳಿಸಿದ ಚುನಾವಣಾ ಪ್ರಣಾಳಿಕೆಗಳು ಒಂದು ಇನ್ನೊಂದರ ಪ್ರತಿಯಂತೆ ಕಾಣಿಸುತ್ತಿವೆ. ಜನಪ್ರಿಯ ಕಾರ್ಯಕ್ರಮಗಳಲ್ಲದೇ ದೂರಾಲೋಚನೆಯ ಯೋಜನೆಗಳ ಕುರಿತು ರಾಜಕೀಯ ಪಕ್ಷಗಳು ಯೋಚಿಸುತ್ತಿಲ್ಲ. ಮಳೆಕಾಡುಗಳ ನಾಶದಿಂದ ನೈಸರ್ಗಿಕ ಏರುಪೇರುಗಳಾಗಿ ಮಳೆಯ ಪ್ರಮಾಣ ಕಡಿಮೆಯಾಗುವುದು, ಮಳೆಯಿಲ್ಲದೇ ನದಿಗಳು ಒಣಗಿಹೋಗುವುದು, ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಪಕವಾದ ವ್ಯವಸಾಯಕ್ಕೆ ಸಂಬಂಧಿಸಿದ ಉದ್ಯೋಗ ಸೃಷ್ಟಿ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಸರಕಾರಿ ಕನ್ನಡ ಮಾಧ್ಯಮದ ಶಾಲೆಗಳ ಸಮಸ್ಯೆಗಳು, ಮಹಾನಗರಗಳಲ್ಲಿರುವ ವಾಹನ ದಟ್ಟಣೆಗಳಿಗೆ ಶಾಶ್ವತ ಪರಿಹಾರಗಳು, ಸಾಮಾನ್ಯ ಪ್ರಜೆಗಳ ಆರೋಗ್ಯ ಸಮಸ್ಯೆಗಳ ಕುರಿತು ಆರ್ಥಿಕ ತಜ್ಞರಿಂದ ಸಲಹೆ ಪಡೆದು ಗಂಭೀರವಾದ ಯೋಜನೆಗಳು ರಾಜಕೀಯ ಪಕ್ಷಗಳಲ್ಲಿ ವೈಜ್ಞಾನಿಕವಾಗಿ ಅಧ್ಯಯನಗೊಂಡು ಪ್ರಣಾಳಿಕೆಗಳಾಗಬೇಕು. ಮತ್ತು ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರುವ ಸರಕಾರವು ಅವುಗಳನ್ನು ಗಂಭೀರವಾಗಿ ಪರಿಗಣಿಸಿ ಜ್ಯಾರಿಗೊಳಿಸಬೇಕು. ಅ

ಬಾನಾಡಿ

*ಬಾಲಕೃಷ್ಣ ನಾಯ್ಕ್ ಡಿ.*



# ಬಸವಣ್ಣ ಮತ್ತು ಅಕ್ಕಮಹಾದೇವಿ ಸ್ಮರಣೆ

## ವರ್ತಮಾನಕ್ಕೆ ಸಲ್ಲುವ ವಚನ ಸಂಸ್ಕೃತಿ ರಾಷ್ಟ್ರೀಯ ವಿಚಾರ ಸಂಕಿರಣ

ದೆಹಲಿ ಕರ್ನಾಟಕ ಸಂಘವು ಬಸವ ಇಂಟರ್‌ನ್ಯಾಷನಲ್ ಫೌಂಡೇಶನ್, ಲಂಡನ್ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು ಸಹಯೋಗದೊಂದಿಗೆ 'ಬಸವಣ್ಣ ಮತ್ತು ಅಕ್ಕಮಹಾದೇವಿ ಸ್ಮರಣೆ'– ವರ್ತಮಾನಕ್ಕೆ ಸಲ್ಲುವ ವಚನ ಸಂಸ್ಕೃತಿ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಇದೇ ಏಪ್ರಿಲ್ 22ರಂದು ಸಂಘದ ಸಭಾಂಗಣದಲ್ಲಿ ಆಯೋಜಿಸಿತ್ತು.

ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ರಾಷ್ಟ್ರೀಯ ಬಸವ ಪುರಸ್ಕೃತರಾದ ಹಿರಿಯ ಚಿಂತಕ ಗೋ. ರು. ಚನ್ನಬಸಪ್ಪ ಅವರು, ಇವೊತ್ತು ರಾಜಕೀಯ ಪಕ್ಷಗಳಲ್ಲಿ ಇಡೀ ಜನಸಮುದಾಯಕ್ಕೆ ಬೇಕಾದ ಮುಖಂಡರು ನಮ್ಮಲ್ಲಿ ಇಲ್ಲ ಎನ್ನುವುದನ್ನು ನಾವೆಲ್ಲ ಒಪ್ಪಿಕೊಳ್ಳಬೇಕು. ಬಸವಣ್ಣನವರಂತಹ ನಾಯಕತ್ವ ನಮಗೆ ಬೇಕಾಗಿದೆ. ಸಾರಥ್ಯವಿಲ್ಲದ ಇಂದಿನ ವ್ಯವಸ್ಥೆಗೆ ವಚನ ಸಂಸ್ಕೃತಿಯ ಸಾರಥಿಯನ್ನು ಒದಗಿಸಬೇಕಾದುದು ಇವತ್ತಿನ ಅತ್ಯಗತ್ಯ. ಬಸವಣ್ಣನವರ ಸುಖೀ ರಾಜ್ಯ ತತ್ವದ ಮೂರು ಅಂಶಗಳು ಕಾಯಕ, ದಾಸೋಹ, ಅನುಭಾವ (self thinking). ಇವು ನಮ್ಮ ವಚನ ಸಂವಿಧಾನದ ಮೂಲ ಆಶೋತ್ತರಗಳು.

ವ್ಯಕ್ತಿ ವ್ಯಕ್ತಿಗಳ ಮದ್ಯೆ ಇದ್ದ ಅಂತರವನ್ನು ನಿವಾರಿಸಿ ಅವರಲ್ಲಿ ನಿಜವಾದ ಸಾತ್ವಿಕ ಪ್ರೇಮ ವಿಶ್ವಾಸವನ್ನು ತುಂಬುವ ಕೆಲಸವನ್ನು ನಮ್ಮ ಶರಣರು ಮಾಡಿದರು. ಅದನ್ನೇ ವಿದ್ವಾಂಸರು ಜಗತ್ತಿನ ಮೊಟ್ಟ ಮೊದಲ ಸಮಾಜೋಧಾರ್ಮಿಕ ಆಂದೋಲನ, ಸಮಾಜೋ ಆರ್ಥಿಕ ಕ್ರಾಂತಿ, ಸಮಾಜೋ ಆಧ್ಯಾತ್ಮಿಕ ಚಳುವಳಿ ಎಂದೆಲ್ಲ ಬಣ್ಣನೆ ಮಾಡಿದ್ದಾರೆ.

ಹನ್ನೆರಡನೆ ಶತಮಾನದಲ್ಲಿದ್ದಂತಹ ಧಾರ್ಮಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಗಳಿಗೆ ಶಾಸ್ತ್ರ ಪುರಾಣಗಳು ಅವುಗಳಲ್ಲಿನ ವಿಧಿ ವಿಧಾನಗಳು, ಕಟ್ಟುಪಾಡುಗಳು ಆಧಾರವೆಂದು ಅಂದಿನ ಸಮಾಜದಲ್ಲಿನ ಪುರೋಹಿತರು, ಪೂಜಾರಿಗಳು ಜನರನ್ನು ನಂಬಿಸಿದ್ದರು. ಅಂತಹ ಶಾಸ್ತ್ರ ಪುರಾಣಗಳಿಗೆ ವಿರುದ್ಧವಾದ ಸಭ್ಯ, ಸಾತ್ವಿಕ, ಸೌಜನ್ಯದ ಸಂಸ್ಕೃತಿಯನ್ನು ಹುಟ್ಟುಹಾಕುವುದೇ ವಚನಕಾರರ ಆಶಯವಾಗಿತ್ತು. ಆ ಶಾಸ್ತ್ರ ಪುರಾಣಗಳೇ ಇಂದಿಗೂ ಕೂಡ ನಮ್ಮನ್ನು ಅದೇ ರೀತಿ ಆಳ್ವಿಕೆ ಮಾಡುತ್ತಿವೆ. ಅವೇ ಕಟ್ಟು ಪಾಡುಗಳೇ, ಪದ್ದತಿಗಳೇ ನಮ್ಮನ್ನು ಕಾಡುತ್ತಿವೆ, ನಮ್ಮ ನಿದ್ದೆ ಗೆಡಿಸುತ್ತಿವೆ, ನಮ್ಮ ನೆಮ್ಮದಿಯನ್ನು ಹಾಳುಗೆಡುವುತ್ತಿವೆ. ಅವರು ಹೇಳುತ್ತಿದ್ದ ಶಾಸ್ತ್ರ ಪುರಾಣ ಕಟ್ಟು ಪಾಡುಗಳು, ವಿಧಿ ವಿಧಾನಗಳನ್ನು ನಾವು ಪ್ರಶ್ನೆ ಮಾಡಬೇಕಿದೆ ಎಂದು ಕರೆ ನೀಡಿದರು.

ವರ್ತಮಾನಕ್ಕೆ ಸಲ್ಲುವ ವಚನ ಸಂಸ್ಕೃತಿ – ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಕೆ. ಮರುಳಸಿದ್ದಪ್ಪ ಅವರು ಮಾತನಾಡಿ ಶರಣರು ಕಲ್ಯಾಣ ರಾಜ್ಯದ ಕನಸು ಕಂಡರೆ ಮತ್ತು ಗಾಂಧೀಜಿಯವರು ಗ್ರಾಮ ಸ್ವರಾಜ್ಯದ ಕನಸು ಕಂಡರು. ಇಂತಹ ಕನಸುಗಳು ನನಸಾಗಿಲ್ಲದಿರಬಹುದು. ಆದರೆ ಅದನ್ನು ನಾವು ಮುನ್ನಡೆಸಿಕೊಂಡು ಹೋಗಬೇಕು. ಯಾವುದೇ ಒಂದು ಚಳುವಳಿ ಬಹಳ ಹೆಚ್ಚೆಂದರೆ ಹತ್ತು ವರ್ಷಗಳ ಕಾಲ ಜೀವಂತವಾಗಿರುವುದೇ ಹೆಚ್ಚು. ಮುಂದಿನ ಶತಮಾನಗಳಲ್ಲಿ ಅದನ್ನೇ ನೆನಪಿಸಿಕೊಂಡು ಮುಂದು ಹೋಗುತ್ತೇವೆ. ಆ ಸಂದರ್ಭದಲ್ಲಿ ಅಂತಹ ಚಳುವಳಿಗಳ ಮೂಲಕ ಕಂಡ ಕನಸು ಸುಂದರವಾಗಿರುತ್ತದೆ. ಆ ಸುಂದರ ಕನಸನ್ನು ಮರೆಯಬಾರದು.

ಬಸವಣ್ಣನವರು ಸಹ ಒಬ್ಬ ರಾಜಕಾರಣಿಯಾಗಿ ಹಾಗೂ ಅನುಭಾವಿಯೂ ಆಗಿದ್ದರು.




ಬಸವಣ್ಣನವರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನೆನಪು ಮಾಡಿಕೊಳ್ಳುವ ಇವೊತ್ತಿನ ರಾಜಕಾರಣಿಗಳು ಬಸವಣ್ಣನವರಿಂದ ಕಲಿಯಬೇಕಾದುದು ಎಂದರೆ "ಹೊನ್ನಿನೊಳಗೊಂದೆಳೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ, ನಾಳಿಂಗೆ ಎಂದೆನಾದೊಡೆ ನಿಮ್ಮಾಣೆ, ನಿಮ್ಮ ಪುರಾತನರಾಣೆ.." "ಎನಗಿಂತ ಕಿರಿಯರಿಲ್ಲ..." "ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಿ ಬಡವನಯ್ಯಾ" "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನವ ಹೊರೆಯ ಹೊರಿಸದಿರಯ್ಯ....." ಮೊದಲಾದ ವಚನಗಳ ಮೂಲಕ ನೀಡಿರುವ ಸಾರ್ವಕಾಲಿಕ ಸಂದೇಶವನ್ನು ನಮ್ಮ ಇಂದಿನ ಪ್ರತಿಯೊಬ್ಬರೂ ಓದಿ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು ಎಂದರು. ದೈನ್ಯತೆ ಬೇರೆ ವಿನಯ ಬೇರೆ 'ವಿನಯ' ವಚನಕಾರಿಗೆ ದೈನ್ಯತೆ ಆಗಿರಲಿಲ್ಲ. ಶರಣರು ವಿನಯತೆಯನ್ನು ಪ್ರತಿಪಾದಿಸಿದರೆ ಹೊರತು ದೈನ್ಯತೆಯನ್ನಲ್ಲ. ಕಕ್ಕಯ್ಯ, ದಾಸಯ್ಯ ಮೊದಲಾದವರನ್ನು ಎದುರುಗೊಂಡಾಗ ಅತ್ಯಂತ ವಿನಯದಿಂದ ನಡೆದುಕೊಳ್ಳುವ ಶರಣರು "ಅಧಿಕಾರ, ಶ್ರೀಮಂತಿಕೆ, ದರ್ಪ" ದ ಎದುರು ಅಷ್ಟೇ ಬಗೆಯ ಆತ್ಮ ಪ್ರತ್ಯಯವನ್ನು ತೋರಿಸುತ್ತಾರೆ. "ನ್ಯಾಯ ನಿಷ್ಠುರಿ ದಾಕ್ಷಿಣ್ಯ ಪರನು ನಾನಲ್ಲ. ಲೋಕವಿರೋಧಿ ಶರಣನಾರಿಗಂಜುವನಲ್ಲ". ಇಲ್ಲಿ ಆತ್ಮ ಪ್ರತ್ಯಯವೂ ಇದೆ ಇದನ್ನು ನಾವು ಮರೆಯಬಾರದು. ಹೀಗೆ ವಿನಯ ಮತ್ತು ಆತ್ಮ ಪ್ರತ್ಯಯ ಎರಡನ್ನು ಹೇಳಿದ ಈ ವಚನ ಸಂಸ್ಕೃತಿ ಹನ್ನೆರಡನೆ ಶತಮಾನದಲ್ಲಿ ಕನ್ನಡದಲ್ಲಿ ಪ್ರತಿಪಾದಿತವಾಗಿರುವುದು ಬಹಳ ಹೆಮ್ಮೆಯ ಸಂಗತಿ.

ಶರಣರ ಇನ್ನೊಂದು ಮಹತ್ವದ ಕೊಡುಗೆ ವರ್ಗ ಸಮಾನತೆ. ಕಾಯಕ ತತ್ವದ ಮುಖ್ಯ ಆಶಯ ಎಲ್ಲರೂ ದುಡಿದು ಮಾತ್ರವೇ ಜೀವಿಸಬೇಕು. ಅಲ್ಲದೆ ದುಡಿದ್ದದರಲ್ಲಿ ಅಗತ್ಯವಿದ್ದಷ್ಟನ್ನು ಮಾತ್ರ ಪ್ರತಿಫಲವನ್ನಾಗಿ ಇಟ್ಟುಕೊಳ್ಳಬೇಕು. ಆಯ್ದಕ್ಕಿ ಮಾರಯ್ಯನನ್ನು ಈಸಕ್ಕಿಯಾಸೆ ನಿಮಗೇಕೆ ಎಂದು ಅವನ ಹೆಂಡತಿ ಪ್ರಶ್ನೆ ಮಾಡುತ್ತಾಳೆ. ಇದನ್ನು ಶ್ರೀಮಂತನ ಹೆಂಡತಿಯೂ ಮಾಡಬಹುದು. ಇಂತಹ ನೈತಿಕ ಸ್ಥೈರ್ಯವನ್ನು ಇಂದಿನ ನಮ್ಮ ಹೆಣ್ಣು ಮಕ್ಕಳು ಮತ್ತು ಪ್ರತಿಯೊಬ್ಬ ಯುವಕರು ಮೈಗೂಡಿಸಿಕೊಂಡು ಅನ್ಯಾಯ ಅಕ್ರಮ ಗಳಿಕೆಯನ್ನು ಪ್ರಶ್ನಿಸುವ ಎದೆಗಾರಿಕೆ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಬಸವ ಇಂಟರ್ ನ್ಯಾಷನಲ್ ಫೌಂಡೇಶನ್‌ನ ಅಧ್ಯಕ್ಷರ ಕುರಿತು ಹೊರತಂದಿರುವ "The Footsteps of Basavanna" ಎಂಬ ಕೃತಿಯನ್ನು ನವದೆಹಲಿಯ ಸಮಾಜವಾದಿ ಚಿಂತಕರಾದ ಶ್ರೀ ಸುಧೀಂದ್ರ ಬದೋರಿಯ ಅವರು ಬಿಡುಗಡೆಗೊಳಿಸಿ ಶ್ರೀ ಎಸ್ ಮಹಾದೇವಯ್ಯ ಅವರ ಸಾಧನೆಗಳನ್ನು ಶ್ಲಾಘಿಸಿದರು.

ಬಸವ ಇಂಟರ್ ನ್ಯಾಷನಲ್ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಎಸ್ ಮಹಾದೇವಯ್ಯ ಅವರು ಮಾತನಾಡಿ, ಬಸವಣ್ಣನವರ ತತ್ವ ಮತ್ತು ಸಿದ್ಧಾಂತಗಳನ್ನು ಲೆನಿನ್, ಮಾವೋ ಮುಂತಾದ ಜಗತ್ತಿನ ಮಹಾನ್ ವ್ಯಕ್ತಿಗಳ ಜೊತೆ ಹೋಲಿಸಿ ಕೃತಿಗಳನ್ನು ತರುವ ಕೆಲಸವನ್ನು ಬಸವ ಫೌಂಡೇಶನ್ ಮಾಡುತ್ತದೆ ಎಂದು ಮಹಾದೇವಯ್ಯ ಅವರು ತಿಳಿಸಿದರು.

ಗೋಷ್ಠಿಕಾರರಾಗಿ ಆಗಮಿಸಿದ್ದ ನಿವೃತ್ತ ಪೋಲಿಸ್ ಅಧಿಕಾರಿ ಡಾ. ಅಜಯ್ ಕುಮಾರ್ ಸಿಂಗ್ ಅವರು 'ಸಮ ಸಮಾಜ ನಿರ್ಮಾಣ' ಎಂಬ ವಿಷಯದ ಕುರಿತು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಾ ಶರಣರು ಹನ್ನೆರಡನೆ ಶತಮಾನದಲ್ಲಿಯೇ ಸಾಮಾಜಿಕ ಸಂಹಿತೆಗಳನ್ನು ರೂಪಿಸಿದ್ದರು. ಅವುಗಳಲ್ಲಿ ವರ್ಗ ಸಮಾನತೆ, ಲಿಂಗ ಸಮಾನತೆ, ಜಾತಿ ಸಮಾನತೆಗಳನ್ನೂ ಒಳಗೊಂಡ ಸಮ ಸಮಾಜ ನಿರ್ಮಾಣ ಮಾಡಲು ಬಹಳ ದೊಡ್ಡ ಆಂದೋಲನವನ್ನು ನಡೆಸಿದ್ದರು. ಅವರ ಆದರ್ಶಗಳನ್ನು ಇವತ್ತಿನ ಜನಾಂಗ ಪಾಲಿಸಿಕೊಂಡು ಬರಬೇಕಾದುದು ಅತ್ಯಗತ್ಯ ಎಂದು ಅಭಿಪ್ರಾಯಪಟ್ಟರು.

ಗಾಯಕರಾದ ಶ್ರೀ ಸಿದ್ದರಾಮ ಕೆಸಾಪುರ ಅವರ ವಚನ ಗಾಯನದೊಂದಿಗೆ ಪ್ರಾರಂಭವಾದ ಉದ್ಘಾಟನ ಸಮಾರಂಭದ ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣವನ್ನು ಕಲಾವಿದರಾದ ಶ್ರೀ ಕೆ. ವಿ. ನಾಗರಾಜ ಮೂರ್ತಿಯವರು ಮಾಡಿದರೆ ವಂದನಾರ್ಪಣೆಯನ್ನು ಶ್ರೀ ವಿವಿ ಬಿರಾದರ್







ಅವರು ನಡೆಸಿಕೊಟ್ಟರು. ಅತಿಥಿಗಣ್ಯರ ಪರಿಚಯವನ್ನು ಶ್ರೀಮತಿ ರಂಜನಿ ಗಿರೀಶ್, ಡಾ. ಅರ್ ಜಗದೀಶ್ ಅವರು ಮಾಡಿದರು. ಚಂದ್ರಶೇಖರ್ ಎನ್ ಪಿ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

## ಗೋಷ್ಠಿ ಕಾರ್ಯಕ್ರಮ :

ವರ್ತಮಾನಕ್ಕೆ ಸಲ್ಲುವ ವಚನ ಸಂಸ್ಕೃತಿ ರಾಷ್ಟ್ರೀಯ ವಿಚಾರ ಸಂಕಿರಣದ ಕುರಿತು ಆಶಯ ನುಡಿಗಳನ್ನು ವ್ಯಕ್ತಪಡಿಸಿದ ಕವಿ, ನಾಟಕಕಾರ, ವಿಮರ್ಶಕ, ಪ್ರೊ. ಹೆಚ್ ಎಸ್ ಶಿವಪ್ರಕಾಶ್ ಅವರು ಮಾತನಾಡಿ ಬಸವಣ್ಣನವರ ವಚನವೊಂದರಲ್ಲಿ "ಒಂದು ಕಬ್ಬಿನ ತೋಟಕ್ಕೆ ಕುರಿಹಿಂಡು ಹೋದರೆ ಅವು ಹೊರಗಿನೆಲೆಯನ್ನೇ ಮೇವವು. ಮದಕರಿಯಲ್ಲದೆ ಕುರಿ ಬಲ್ಲುದೆ ನಿಮ್ಮ ಕೂಡಲ ಸಂಗಮದೇವ" ಎಂಬುದಾಗಿ ಹೇಳಿರುವುದನ್ನು ಪರಿಗಣಿಸಿ ನೋಡಿದರೆ ನಾವು ಹದಿನೈದನೇ ಶತಮಾನದಿಂದ ಇಪ್ಪತ್ತನೇ ಶತಮಾನದವರೆಗೂ ಉತ್ಪಾದಿತವಾಗಿರುವ ಬಹುತೇಕ ಚಿಂತನೆಗಳನ್ನು ನೋಡಿದರೆ ನಾವು ಇನ್ನೂ ಮದಕರಿಗಳಾಗಿಲ್ಲ. ಬರೀ ಕುರಿಗಳಾಗಿ ಹೊರಗಿನೆಲೆಯನ್ನೇ ಮೇಯುತ್ತಿದ್ದೇವೆ ಎನ್ನುವ ಅನುಮಾನ ನನ್ನದು. ನಾನು ಕೂಡ ವಚನಗಳ ಬಗ್ಗೆ ಬರೆದಿದ್ದು, ನಾಟಕವನ್ನು ಬರೆದಿದ್ದಾಗಲೂ ಇದುವರೆವಿಗೂ ಬರೀ ಹೊರಗಿನ ಎಲೆಯನ್ನು ಮಾತ್ರ ಮೇದಿದ್ದೇನೆ ಹೊರತು ಮೂಲಕ್ಕೆ ಹೋಗಿಲ್ಲ ಇನ್ನೂ ಹೋಗಬೇಕಾಗಿದೆ ಎಂದು ಅಭಿಪ್ರಾಯ ಪಟ್ಟರು.

ಗೋಷ್ಠಿಕಾರರಾಗಿ ಆಗಮಿಸಿದ್ದ ಅಖಿಲ ಭಾರತೀಯ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಬಸವರಾಜ ಸಾದರ – ಅವರು ಶ್ರಮ ಸಂಸ್ಕೃತಿಯ ಪುನರ್ ವ್ಯಾಖ್ಯಾನ ಎಂಬ ವಿಷಯ ಕುರಿತು ಮಾತನಾಡಿ, ವರ್ತಮಾನಕ್ಕೆ ಸಲ್ಲುವ ವಚನ ಸಂಸ್ಕೃತಿ ಎಂಬುದನ್ನು ಅವಲೋಕಿಸಿ ನೋಡಿದಾಗ ಇವೊತ್ತಿನ ದಿನ ನಮ್ಮ ರಾಜಕೀಯ ವ್ಯವಸ್ತೆಯಲ್ಲಿರುವ ಭ್ರಷ್ಟಾಚಾರ, ಅಕ್ರಮ, ಜನರೂ ಇಂದಿಗೂ ಹೋಮ, ಹವನ, ಜ್ಯೋತಿಷ್ಯ, ಮೂಢನಂಬಿಕೆಗಳ ಬೆನ್ನು ಬಿದ್ದಿರುವುದು, ದೇಶದಲ್ಲಿ ಪ್ರತಿನಿತ್ಯ ವರದಿಯಾಗುತ್ತಿರುವ ಅತ್ಯಾಚಾರಗಳು ಮೊದಲಾದವುಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ವಚನ ಸಾಹಿತ್ಯದಲ್ಲಿ ನಮಗೆ ಯಾವ ಬಗೆಯ ಮಾರ್ಗದರ್ಶನಗಳು ಸಿಗುತ್ತವೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಇದಾಗಿದೆ ಎಂದರು. ಇಷ್ಟು ವರ್ಷಗಳಲ್ಲಿ ವಚನಗಳನ್ನು ಕುರಿತು ನಾವೆಲ್ಲರೂ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಪುಸ್ತಕಗಳನ್ನು ಬರೆದಿದ್ದಾರೆ. ಭಾಷಣಗಳನ್ನು ಮಾಡಿದ್ದೇವೆ. ಆದರೆ ಇವೊತ್ತಿನ ಸಂದರ್ಭದಲ್ಲಿ ಸಮಾಜದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ನೋಡಿದರೆ ನಾವು ಮಾಡಿರುವ ಇಷ್ಟೆಲ್ಲಾ ವಚನ ಚಿಂತನೆ, ಅಧ್ಯಯನ ಮೊದಲಾದ ಕೆಲಸಗಳ ಪ್ರಯೋಜನ ನಮ್ಮ ಸಮಾಜಕ್ಕೆ ಮುಟ್ಟಿದೆಯೇ ಎಂದು ನಾವು ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ನಾವು ಇಂದು ವಚನ ಸಾಹಿತ್ಯವನ್ನು ಓದುವ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕಿದೆ. ಇಪ್ಪತ್ತೊಂದನೆ ಶತಮಾನಕ್ಕೆ ಬೇಕಾದ ಎಲ್ಲ ರೀತಿಯಾದ ಪ್ರಜಾಪ್ರಭುತ್ವದ ಸತ್ವಗಳನ್ನು ಶರಣರು ಹನ್ನೆರಡನೆ ಶತಮಾನದಲ್ಲಿಯೇ ರೂಪಿಸಿದ್ದರು ಎಂಬುದು ಹೆಮ್ಮೆ ಸಂಗತಿ.

ಮತ್ತೊಬ್ಬ ಗೋಷ್ಠಿಕಾರರಾದ ಡಾ. ಎಂ. ಎಸ್. ಆಶಾದೇವಿ ಅವರು ಸ್ತ್ರೀ–ಪುರುಷರ ಸಮಾನತೆ ಕುರಿತು ವಚನಕಾರರ



ನಿಲುವುಗಳೇನು? ಎಂಬ ಬಗ್ಗೆ ಮಾತನಾಡುತ್ತಾ ಶಾಸ್ತ್ರವೂ ಆಗಿರುವ ಕಾವ್ಯವೂ ಆಗಿರುವ ಹೊಸದಾದ ಒಂದು ಉಕ್ತಿಕ್ರಮ ವಚನಗಳು. ಇದು ಕೇವಲ ಉಕ್ತಿ ಕ್ರಮ ಮಾತ್ರವಲ್ಲ ಈ ಮೂಲಕ ವಚನ ಕಾರರು ಹೊಸ ಸಂಹಿತೆಯನ್ನು, ಲೋಕ ಮೀಮಾಂಸೆಯನ್ನು ಕಟ್ಟಲು ಪ್ರಯತ್ನ ಪಟ್ಟರು. ವಚನಗಳನ್ನು ಓದುವಾಗೆಲ್ಲ ನನಗೆ ಅವು ಆಪತ್ಕಾಲೀನ ಕವಿತೆಗಳು ಎಂದೆನಿಸುತ್ತದೆ. ನಮ್ಮ ಕಾಲದ ಸಂಕಷ್ಟಗಳು, ಸವಾಲುಗಳು, ಅದರ ಬಿಕ್ಕಟ್ಟುಗಳು ಇವೆಲ್ಲದರೊಡನೆ ಸಂವಾದ ಮಾಡುವುದಕ್ಕೆ, ಅರ್ಥ ಮಾಡಿಕೊಳ್ಳುವುದಕ್ಕೆ ಎಲ್ಲದಕ್ಕೂ ಬೇಕಾಗಿರುವ ದ್ರವ್ಯವನ್ನು ವಚನಗಳು ನಮಗೆ ಕೊಡುತ್ತಿವೆ, ನನ್ನಂತವಳಿಗೆ ಅವು ಯಾವಾಗಲೂ ಆಪತ್ಕಾಲೀನ ಕಾವ್ಯಗಳಾಗಿ ಯಾವಾಗಲೂ ಇರುತ್ತದೆ ಎಂದರು.

ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ಜಾನಪದ ವಿದ್ವಾಂಸ ವಿಮರ್ಶಕ, ಡಾ, ಪುರುಷೋತ್ತಮ ಬಿಳಿಮಲೆ ಅವರು – ವಚನಕಾರರು ಕನ್ನಡದಲ್ಲಿ ದೈವತ್ವವನ್ನು ಕಂಡವರು. ವಚನಕಾರರು ಪರಸ್ಪರ ವಾಗ್ವಾದಗಳಲ್ಲಿ ಭಾಗವಹಿಸಿ ಪರಸ್ಪರ ಒಬರನ್ನೊಬ್ಬರು ಖಂಡಿಸಿ, ನಿರಾಕರಿಸಿ ನಡೆಸಿದ ಚಿಂತನೆಗಳನ್ನು ನಡೆಸಲಿಕ್ಕೆ ಅನುಭವ ಮಂಟಪ ವೇದಿಕೆಯಾಗಿತ್ತು. ಆದರೆ ವರ್ತಮಾನ ಭಾರತದಲ್ಲಿ ವಾಗ್ವಾದಗಳನ್ನು ಕಳೆದುಕೊಂಡು ಬಿಟ್ಟಿದ್ದೇವೆ. ಅದಕ್ಕೆ ಮುಕ್ತ ಅವಕಾಶವೇ ಇಲ್ಲ. ಕೇವಲ ಆರೋಪಗಳು ಮತ್ತು ಪ್ರತ್ಯಾರೋಪಗಳು ಮಾತ್ರ ಕೇಳಿಬರುತ್ತಿವೆ. ಇಡೀ ಭಾರತ ಬೌದ್ಧಿಕವಾಗಿ ದೊಡ್ಡ ದೊಡ್ಡ ಚರ್ಚೆಗಳನ್ನು ನಡೆಸಿಕೊಂಡು ಬರುತ್ತಿದ್ದ ಉದಾಹರಣೆಗಳಿವೆ. ಹಾಗಾಗಿ ಇವೊತ್ತು ವರ್ತಮಾನ ಭಾರತದಲ್ಲಿರುವ ನಮಗೆ ನಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಪರಸ್ಪರ ವಾಗ್ವಾದಗಳ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಲು ವಚನ ಸಂಸ್ಕೃತಿ ಮಾದರಿಯಾಗಬೇಕು ಎಂದರು.

ಅಂಬೇಡ್ಕರ್ ಅವರಿಗೆ ವಚನಗಳನ್ನು ಓದುವುದಕ್ಕೆ ಸಿಗದಿದ್ದುದು ಇತಿಹಾಸದಲ್ಲಿ ನಡೆದ ಒಂದು ದೊಡ್ಡ ತಪ್ಪು. ಹಾಗಾಗಿಯೇ ಬೇರೆ ಬೇರೆ ಭಕ್ತಿ ಪರಂಪರೆಗಳ ಬಗ್ಗೆ ಮಾತನಾಡುವ ಅವರು ವಚನಗಳ ಬಗ್ಗೆ ಮಾತನಾಡಲು ಆಗಲಿಲ್ಲ. ಅವರಿಗೇನಾದರೂ ವಚನಗಳ ಬಗ್ಗೆ ತಿಳಿದಿದ್ದರೆ ಅವರ ಚಿಂತನೆಯ ರೀತಿಯೇ ಬದಲಾಗುತ್ತಿತ್ತು. ಭಾರತಕ್ಕೆ ಅನ್ವಯವಾಗುವಂತಹ ಒಂದು ಮುಂದೆನಾದರೂ ಎಲ್ಲ ಧರ್ಮೀಯರಿಗೆ ಅನುಕೂಲವಾಗುವ ಒಂದು ಧರ್ಮ ಗ್ರಂಥ ಬರೆಯಬೇಕಾದರೆ ಅದಕ್ಕೆ ಬೇಕಾದ ಬೀಜರೂಪಿ ಸತ್ವಗಳು ವಚನ ಸಾಹಿತ್ಯದಲ್ಲಿವೆ. “ದಯವೇ ಧರ್ಮದ ಮೂಲವಯ್ಯ”, “ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ ...” ಇತ್ಯಾದಿಗಳು ನಮಗೆ ಇಡೀ ಭಾರತದ ಎಲ್ಲರಿಗೂ ಅನ್ವಯವಾಗುವಂತಹ ವಿಚಾರಗಳು. ಆದ್ದರಿಂದ ವಚನ ಸಂಸ್ಕೃತಿ ಅತ್ಯಗತ್ಯ ಎಂದು ಕರೆ ನೀಡಿದರು.



ಗೋಷ್ಠಿಯಲ್ಲಿ ಭಾಗವಹಿಸಿದ್ದ ಅತಿಥಿ ಗಣ್ಯರನ್ನು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿದರೆ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ. ಎಸ್. ಶಶಿಕುಮಾರ್ ಅವರು ವಂದನಾರ್ಪಣೆ ಮಾಡಿದರು. ಗೋಷ್ಠಿಕಾರರನ್ನು ಶ್ರೀಕಾಂತ ಚೌಕಿಮಠ ಮತ್ತು ಡಾ. ವೈ.ಅವನೀಂದ್ರನಾಥ್ ರಾವ್ ಅವರು ಪರಿಚಯಿಸಿದರು. ಎನ್ ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

## ಸಮಾರೋಪ ಸಮಾರಂಭ:

ಸಮಾರೋಪ ನುಡಿಗಳನ್ನು ವ್ಯಕ್ತಪಡಿಸಲು ಆಗಮಿಸಿದ್ದ ರಾಜ್ಯ ಸಭಾ ಸದಸ್ಯರಾದ ಡಾ. ಎಲ್ ಹನುಮಂತಯ್ಯ ಅವರು ಮಾತನಾಡುತ್ತಾ ಇಪ್ಪತ್ತೊಂದನೇ ಶತಮಾನವನ್ನು ಅಭಿವೃದ್ಧಿಶೀಲ ವ್ಯವಸ್ಥೆಯಲ್ಲಿದ್ದೇವೆ ಎಂದು ಕರೆಯುತ್ತಿರುವುದನ್ನು ನೋಡುತ್ತಿದ್ದೇವೆ. ಹಾಗಾದರೆ ಇವೊತ್ತು ನಾವು ಎದುರಿಸುತ್ತಿರುವ ಸವಾಲುಗಳು ಅಭಿವೃದ್ಧಿಶೀಲ ರಾಷ್ಟ್ರದ ಲಕ್ಷಣಗಳೇ ಎಂಬುದನ್ನು ನಾವು ಪರಾಮರ್ಶಿಸಬೇಕು. ಅಭಿವೃದ್ಧಿ ಎನ್ನುವುದು ಯಾವುದು? ಹನ್ನೆರಡನೆ ಶತಮಾನದಲ್ಲಿ ಭಾರತದ ಸಮಾಜದ ಒಳಗಡೆ ಒಂದು ಸಣ್ಣ ನವ ಸಮಾಜ ಕಟ್ಟುವ ಅಭೀಪ್ಸೆ ಒಂದು ಸಮುದಾಯದ ನಡುವೆ ಹುಟ್ಟಿಕೊಂಡಿತ್ತಲ್ಲ ಅದನ್ನು ಅಭಿವೃದ್ಧಿಶೀಲ ಬೆಳವಣಿಗೆ ಅಂತ ಕರೆಯಬೇಕೆ ಅಥವ ಬೇಡವೇ ಎಂಬ ಪ್ರಶ್ನೆಯನ್ನು ನಾನು ಹಾಕಿಕೊಳ್ಳಲು ಬಯಸುತ್ತೇನೆ, ಎಂದರು.

ನಾವು ಅಭಿವೃದ್ಧಿಯನ್ನು ನಮ್ಮ ಆರ್ಥಿಕ





ಬೆಳವಣಿಗೆಯ ಮಾನದಂಡವಾಗಿ ಇಟ್ಟುಕೊಂಡಿದ್ದೇವೆ. ಇವತ್ತು ಪ್ರಪಂಚದಲ್ಲಿ ಭಾರತ ಅಭಿವೃದ್ಧಿಶೀಲ ರಾಷ್ಟ್ರ ಎಂದು ಹೇಳುತ್ತಿರುವಾಗ ಅದರ ಹಿಂದೆ ಆರ್ಥಿಕ ಮಾನದಂಡಗಳಷ್ಟೇ ಇವೆ. ಆದರೆ ನೈತಿಕ ಬದುಕಿಗೆ ಅದನ್ನು ಮಾನದಂಡವನ್ನಾಗಿ ಇಟ್ಟುಕೊಂಡಿಲ್ಲ. ಧರ್ಮ ಮನುಷ್ಯರನ್ನು ಕೂಡಿಸುವ ಸಂಗಮ ಆಗಬೇಕು. ಶರಣರು, ಸಂತರು, ಸೂಫಿಗಳು, ಭಾರತೀಯ ಪರಂಪರೆಯಲ್ಲಿ ಧರ್ಮವನ್ನು ಕೂಡಿಸುವ ಸಂಗಮವನ್ನಾಗಿಯೇ ಮಾಡಿಕೊಂಡಿದ್ದರು. ಇಂತಹ ಶರಣರು ನಡೆಸಿದ ಈ ಚಳವಳಿ ಶ್ರಮ ಜೀವಿಗಳ ಚಳವಳಿ. ಇವತ್ತು ನಾವು ಯಾವುದನ್ನು ದಲಿತ/ ಭಾಷಾ / ಮಹಿಳಾ ಚಳುವಳಿ ಎಂದು ಕರೆಯುತ್ತೇವೆಯೋ ಅವೆಲ್ಲ ವಚನ ಚಳವಳಿಯ ಭಾಗ. ಬದುಕನ್ನು ಸಮಗ್ರವಾಗಿ ನೋಡುವ, ಬದುಕನ್ನು ನೈತಿಕವಾಗಿ ನೋಡುವ ಕಟ್ಟುವ ಚಳುವಳಿ ವಚನ ಚಳವಳಿ ಎಂದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿರುವ ಶ್ರೀ ವಿಶುಕುಮಾರ್ ಅವರು ಮಾತನಾಡಿ ಹನ್ನೆರಡನೆ ಶತಮಾನದ ವಚನ ಸಂಸ್ಕೃತಿ ಇಡೀ ಕನ್ನಡ ನಾಡು ಸಂಭ್ರಮಿಸುವ ಒಂದು ಯುಗ. ವಚನ ಸಾಹಿತ್ಯ ನಮಗೆ ಒಂದು ದೊಡ್ಡ ಗಣಿ. ಬಸವಣ್ಣನವರು ಮತ್ತು ಅವರನ್ನು ಅನುಸರಿಸಿದ ಒಂದು ದೊಡ್ಡ ಶರಣ ಪಡೆ ಇಪ್ಪತ್ತೊಂದನೆ ಶತಮಾನಕ್ಕೆ ಹಾಗೂ ಎಲ್ಲ ಕಾಲಕ್ಕೆ ಒಪ್ಪಿತವಾಗುವ ಒಳ್ಳೆಯ ಸಂದೇಶಗಳನ್ನು ನೀಡಿರುವುದನ್ನು ಕನ್ನಡೇತರ ಜನತೆಗೂ ತಲುಪಿಸುವ ಕೆಲಸ ಮಾಡಬೇಕು. ಅದಕ್ಕಾಗಿ ಮುಂದಿನ ವರ್ಷದಿಂದ ಇನ್ನೂ ವ್ಯವಸ್ಥಿತವಾಗಿ ನಾವು ಇಂತಹ ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಜೆ. ಎನ್.ಯು. ನಂತಹ ಶೈಕ್ಷಣಿಕ ಸಂಶೋಧನೆಯಲ್ಲಿ ತೊಡಗಿರುವ ಸಂಸ್ಥೆಗಳಲ್ಲಿ ಹಮ್ಮಿಕೊಂಡು ಬೇರೆ ಭಾಷೆಯ ವಿದ್ವಾಂಸರುಗಳನ್ನು ಒಳಗೊಂಡ ಗೋಷ್ಠಿಗಳನ್ನು ನಡೆಸುವ ಪ್ರಯತ್ನ ಮಾಡಲು ಕನ್ನಡ ಸಂಸ್ಕೃತಿ ಇಲಾಖೆ ಅಗತ್ಯ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಇಂದಿನ ಯುವಜನಾಂಗಕ್ಕೆ ಉತ್ತಮ ಜೀವನ ನಡೆಸಲು ಬೇಕಾದ ಎಲ್ಲ ತತ್ವಗಳನ್ನು ಒಳಗೊಂಡಿರುವ ಧರ್ಮ ಅದು, ವಚನ ಧರ್ಮ ಎಂದು ತಿಳಿಸಿದರು. ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಎಲ್ಲ ಗಣ್ಯರನ್ನು ಶ್ರೀ ಸಿ. ಎಂ ನಾಗರಾಜ ಅವರು ಸ್ವಾಗತಿಸಿದರು. ಬಸವ ಇಂಟರ್ ನ್ಯಾಷನಲ್ ಫೌಂಡೇಶನ್‌ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ. ವಿ. ನಾಗರಾಜಮೂರ್ತಿ ಅವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮ ನಿರ್ವಹಣೆಯನ್ನು ಶ್ರೀ ಚಂದ್ರಶೇಖರ್ ಎನ್.ಪಿ ಮಾಡಿದರು.

ವಿಚಾರ ಸಂಕಿರಣದ ನಂತರ ಶ್ರೀ ಸಿದ್ದರಾಮ ಕೆಸಾಪುರ ಅವರಿಂದ ವಚನ ಸಂಗೀತ, ಬೆಂಗಳೂರಿನ ಪ್ರಯೋಗ ರಂಗ ತಂಡದಿಂದ ವಚನ ದೃಶ್ಯ ರೂಪಕ ಮತ್ತು ಧಾರವಾಡದ ಶ್ರೀಮತಿ ನಾಗರತ್ನ ಹಡಗಲಿ ಮತ್ತು ತಂಡದವರಿಂದ ವಚನ ನೃತ್ಯ ರೂಪಕವನ್ನು ಏರ್ಪಡಿಸಲಾಗಿತ್ತು. ಜೊತೆಗೆ ಸ್ಥಳೀಯ ಪ್ರತಿಭೆಗಳಿಂದ, ಮುಖ್ಯವಾಗಿ ಮಕ್ಕಳಿಂದ ವಚನ ಗಾಯನ ಮತ್ತು ನೃತ್ಯಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅ

**ಚಂದ್ರಶೇಖರ್ ಎನ್.ಪಿ**















# ಪದ್ಮಶ್ರೀ ಪುರಸ್ಕೃತ ಡಾ. ದೊಡ್ಡರಂಗೇಗೌಡ ಅವರಿಗೆ ಸಂಘದಿಂದ ಅಭಿನಂದನೆ




ಲೇಖಕ ತನ್ನ ಬದುಕನ್ನಷ್ಟೇ ಅನಾವರಣ ಮಾಡಿದರೆ ಸಾಲದು, ಸುತ್ತಣ ಸಮಾಜವನ್ನು ಕೂಡಾ ಅವನು ಗಂಭೀರವಾಗಿ ಗಮನಿಸಬೇಕು. ಸಮಾಜದಲ್ಲಿರುವ ಎಲ್ಲಾ ಓರೆಕೋರೆಗಳನ್ನು ಗಮನಿಸಿ ಸಾಹಿತಿ ಸಮಾಜಮುಖಿಯಾಗಿರಬೇಕು ಎಂದು ಪದ್ಮಶ್ರೀ ಪುರಸ್ಕೃತ ಡಾ. ದೊಡ್ಡರಂಗೇಗೌಡ ಅವರು ಹೇಳಿದರು. ಅವರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವು ಅವರನ್ನು ಇದೇ ಏಪ್ರಿಲ್ 1ರಂದು ಗೌರವಿಸಿದಾಗ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದರು.

“ಬದುಕು ಬಹಳ ದೊಡ್ಡದು. ಪ್ರಶಸ್ತಿಗಳಿಗಿಂತ ಬದುಕು ದೊಡ್ಡದು ಎಂದು ನಾನು ಭಾವಿಸಿದವನು. ಬದುಕಿನಲ್ಲಿ ನಾವು ಏನು ಸಾಧನೆ ಮಾಡಬೇಕಾದರೂ ಕೂಡಾ ನಮ್ಮ ಮಹತ್ವಾಕಾಂಕ್ಷೆಯನ್ನು ನಾವು ಮರೆಯಬಾರದು” ಎಂದು ಅವರು ಹೇಳಿದರು. ಒಬ್ಬ ಬರಹಗಾರನಿಗೆ ಅತ್ಯುತ್ತಮ ಕೃತಿಗಳನ್ನು ಬರೆಯುವುದೇ ಅಥವಾ ತನ್ನ ಎಲ್ಲಾ ಅನುಭವಗಳನ್ನು ಕೂಡಾ ಅದನ್ನು ಅಭಿವ್ಯಕ್ತಿ ರೂಪ ಕೊಟ್ಟು ಅದನ್ನು ಸಾಹಿತ್ಯ ಕೃತಿಗಳನ್ನಾಗಿ ಮಾರ್ಪಡಿಸತಕ್ಕಂತದ್ದೇ ಅವನ ಮಹತ್ವಕಾಂಕ್ಷೆ ಮತ್ತು ಅದು ಅವನ ಕಾಯಕ. ನನಗೆ ಬರವಣಿಗೆ ಕೂಡಾ ಒಂದು ತಪಸ್ಸು ಎಂದು ಅವರು ಹೇಳಿದರು.

ಅವರು 1960ನೇ ಇಸವಿಯಲ್ಲಿ ಬರೆಯಲು ಪ್ರಾರಂಭಿಸಿ ಆಕಾಶವಾಣಿ ಮತ್ತು ಆಗಿನ ಪತ್ರಿಕೆಗಳಲ್ಲಿ ಕವಿತೆಗಳನ್ನು ಪ್ರಕಟಿಸಿದರು. “ನಾನು ಬರೆಯುತ್ತಾ ಹೋದೆ, ಬೆಳೆಯುತ್ತಾ ಹೋದೆ, ಕನ್ನಡವನ್ನೇ ನಿಚ್ಚಳವಾಗಿ ಬಳಸುತ್ತಾ ಹೋದೆ. ನನ್ನ ಬದುಕಿನ ಎಳೆಎಳೆಯು ಕೂಡಾ ನನ್ನ ಬರವಣಿಗೆಯಲ್ಲಿದೆ,” ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಖ್ಯಾತ ರಂಗ ನಿರ್ದೇಶಕ ಶ್ರೀ ಎಂ.ಎಸ್. ಸತ್ಯು ಅವರು ಮಾತನಾಡುತ್ತ ನನ್ನ ಮಾಧ್ಯಮವು ನಾಟಕ ಮತ್ತು ಸಿನೇಮಾ ಎಂದರು. ಡಾ. ದೊಡ್ಡರಂಗೇಗೌಡರಿಗೆ ಪದ್ಮಶ್ರೀ ಪ್ರಶಸ್ತಿ ಬಂದಿರುವುದು ಬಹಳ ಸಂತೋಷ ತಂದಿದೆ ಎಂದರು. ಅವರನ್ನು ಕೂಡಾ ಸಂಘದ ಪರವಾಗಿ ಅಭಿನಂದಿಸಲಾಯಿತು. ಇದೇ ಸಂದರ್ಭದಲ್ಲಿ ಪ್ರಸ್ತುತಗೊಂಡ ಶ್ರೀ ಎಂ.ಎಸ್. ಸತ್ಯು ನಿರ್ದೇಶನದ ಗುಲ್ ಏ ಬಕಾವಲಿ ನಾಟಕ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ ಅಬ್ಬಕ ಕುರಿತಾಗಿ ಹಿಂದಿಯಲ್ಲಿ ಮತ್ತಿತರ ಭಾಷೆಯಲ್ಲಿ ನಾಟಕಗಳು ಆಗಬೇಕು ಎಂದರು. ಕಾರ್ಯಕ್ರಮವನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ನಿರೂಪಿಸಿದರು. ಡಾ. ಅಹಲ್ಯಾ ಚಿಂತಾಮಣಿ, ಹಿರಿಯ ಕಲಾವಿದ ಶ್ರೀ ಭೀಮರಾವ್ ಮುರಗೋಡ ಅವರು ಉಪಸ್ಥಿತರಿದ್ದರು. ಅ

**ಅಭಿಮತ ವರದಿ**















# ಗುಲ್ ಎ ಬಕಾವಲಿ

ನೂರಾರು ವರ್ಷಗಳ ಹಿಂದೆ ನರ್ಮದಾ ನದಿಯ ತೀರದಲ್ಲಿ, ಮಹಾ ಗರ್ವಿಯಾದ ರಾಜನೊಬ್ಬ ರೇವ ಎಂಬ ದೇಶವನ್ನು ಆಳುತ್ತಿದ್ದ, ಅನೇಕ ಪತ್ನಿಯರನ್ನು ಹೊಂದಿದ್ದ ಆ ರಾಜನು ಕ್ರೂರಿ ಹಾಗೂ ಅಹಂಕಾರಿಯಾಗಿದ್ದ. ವಿಷಯಲಂಪಟನೂ ಆಗಿದ್ದ ಅವನು ಪ್ರಜೆಗಳ ಹಿತವನ್ನು ಕಡೆಗಣಿಸಿದ್ದ. ಶಾಪವೊಂದು ಹೊಂಚು ಹಾಕಿ ಸಮಯ ಕಾಯುತ್ತಿರುವುದನ್ನು ಅವನು ಊಹಿಸಿಯೂ ಇರಲಿಲ್ಲ. ಅವನ ಮೂರನೆಯ ಪತ್ನಿ ಗರ್ಭಿಣಿಯಾದಾಗ, ಅವನು ತನ್ನ ನವಜಾತ ಶಿಶುವನ್ನು ನೋಡಿದ ಕೂಡಲೇ ತನ್ನ ದೃಷ್ಟಿಯನ್ನು ಕಳೆದುಕೊಳ್ಳುವನೆಂದು ಜ್ಯೋತಿಷಿಗಳು ಭವಿಷ್ಯ ನುಡಿದಿರುತ್ತಾರೆ. ಇದರಿಂದ ಹೆದರಿದ ರಾಜನು ತನ್ನ ಗರ್ಭಿಣಿ ರಾಣಿಯನ್ನು ತ್ಯಜಿಸಿ ಕಾಡಿಗಟ್ಟುತ್ತಾನೆ. ಅನೇಕ ವರ್ಷಗಳ ನಂತರ, ಬೇಟೆಯ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ಅವನು ತನ್ನ ಮಗನೊಂದಿಗೆ ಮುಖಾಮುಖಿಯಾಗುತ್ತಾನೆ. ಅವನ ಮಗ, ಈಗ ಒಬ್ಬ ಸುಂದರ ಯುವಕ, ಹುಲಿಯೊಂದರ ಜೊತೆ ಆಟವಾಡುತ್ತಿರುತ್ತಾನೆ. ರಾಜನು ತನ್ನ ಮಗನನ್ನು ನೋಡಿದಾಗ, ಶಾಪ ನಿಜವಾಗುತ್ತದೆ. ಅವನು ದೃಷ್ಟಿ ಕಳೆದುಕೊಂಡು ಕುರುಡನಾಗುತ್ತಾನೆ. ಆದರೆ ಅವನ ದೃಷ್ಟಿಹೀನತೆಗೆ ಒಂದು ಪರಿಹಾರವಿದೆ. ಬಕಾವಲಿಯ ಹೂವನ್ನು ತಂದು ಅದರ ರಸವನ್ನು ಕಣ್ಣಿಗೆ ಹಾಕುವುದೇ ನಿವಾರಣೆ, ಈ ಸ್ವರ್ಗೀಯ ಹೂವು ಮಾಂತ್ರಿಕ ಶಕ್ತಿ ಹೊಂದಿರುತ್ತದೆ.

ಕಿರಿಯ ರಾಜಕುಮಾರ ತಾಜ್-ಉಲ್-ಮುಲ್ಕನು ಸಾಕಷ್ಟು ಸಾಹಸ ಮಾಡಿ, ಬಕಾವಲಿಯ ಹೂವನ್ನು ಪಡೆದು, ರಾಜನಿಗೆ ದೃಷ್ಟಿ ಮರಳಿ ದೊರೆಯುವಂತೆ ಮಾಡುತ್ತಾನೆ.

ಸುಂದರಿ ದಿಲ್‌ಬರ್‌ಳನ್ನು ವರಿಸಬೇಕಂದಿರುವಾಗಲೇ ದೇವ ಕನ್ಯೆ ಬಕಾವಲಿ ಅಲ್ಲಿಗೆ ಬಂದು ತಾಜ್‌ನನ್ನು ಧರ್ಮ ಸಂಕಟದಲ್ಲಿ ಸಿಲುಕಿಸುವುದರೊಂದಿಗೆ ಕಥೆ ಮುಕ್ತಾಯವಾಗುತ್ತದೆ.

ಮೂಲ ಕಥೆ ನರ್ಮದಾ ನದಿ ತೀರದಲ್ಲಿ ಅನಾಮಧೇಯ ಲೇಖಕನೊಬ್ಬ ಪಾರ್ಸಿ ಭಾಷೆಯಲ್ಲಿ ಬರೆದದ್ದು, ವಿವಿಧ ಭಾರತೀಯ ಭಾಷೆಗಳಲ್ಲಿ ಅನೇಕ ರೂಪಗಳಲ್ಲಿ ದೊರೆತಿವೆ. ತೆಲುಗು, ತಮಿಳು, ಉರ್ದು, ಬಂಗಾಲಿ, ಪಂಜಾಬಿ ಮತ್ತಿತರ ಭಾಷೆಗಳಲ್ಲಿ ಇದೇ ಕಥೆಯನ್ನಾಧರಿಸಿದ ಚಲನಚಿತ್ರಗಳು ನಿರ್ಮಾಣಗೊಂಡಿವೆ. 'ಗುಲ್-ಎ-ಬಕಾವಲಿ' ಗುಬ್ಬಿ ವೀರಣ್ಣನವರು ನಾಟಕ ಮಂಡಳಿಯ ಖ್ಯಾತ ನಾಟಕಗಳಲೊಂದಾಗಿತ್ತು.

ವಿನ್ಯಾಸ ಮತ್ತು ನಿರ್ದೇಶನ ಎಂ.ಎಸ್. ಸತ್ಯು. ಇದು ಕನ್ನಡ ಭಾರತಿ ಮತ್ತು ಎ.ಡಿ.ಎ. ರಂಗ ತಂಡಗಳ ಜಂಟಿ ಪ್ರಸ್ತುತಿ. ನಾಟಕದ ಮೊದಲ ಪ್ರದರ್ಶನ ಎ.ಡಿ.ಎ. ರಂಗಮಂದಿರದಲ್ಲಿ ಆಗಸ್ಟ್ 7, 2017ರಂದು ಪ್ರದರ್ಶನಗೊಂಡಿತು. ಅ





# ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆ

ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆಯನ್ನು ದೆಹಲಿಯ ಕರ್‌ಕರ್‌ಡೂಮ್ ಕೋರ್ಟಿನ ಜಿಲ್ಲಾ ಮುಖ್ಯ ನ್ಯಾಯಾಧೀಶರಾದ ಶ್ರೀ ಎ.ಎಸ್. ಜಯಚಂದ್ರ, ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷೆ ಶ್ರೀಮತಿ ಆಶಾಲತ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸಂತೋಷ್ ಜೆ. ಅವರು ಇದೇ ಏಪ್ರಿಲ್ ೮ರಂದು ಮಾಡಿದರು. ಕ್ರೀಡಾ ಉಪಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಕ್ರೀಡಾ ಉಪಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಬಹುಮಾನ ವಿತರಣಾ ಕಾರ್ಯಕ್ರಮವನ್ನು ನಿರೂಪಿಸಿದರು.

**ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ತಂಡಗಳು** : ಕರ್ನಾಟಕ ಭವನ, ಫೇಸ್–2–ಮಕ್ಕಳು, ಜನಕಪುರಿ ಮಕ್ಕಳು, ಕರ್ನಾಟಕ ಭವನ, ಫೇಸ್–1–ಮಕ್ಕಳು, ಪುಣ್ಯಕೋಟಿ, ಗುರುಗ್ರಾಮ ಮಕ್ಕಳು, ಸಂಜಯ್ ಮತ್ತು ತಂಡ, ಗುರುಗ್ರಾಮ, ಸ್ವರಾಂಜಲಿ ತಂಡ, ಗುರುಗ್ರಾಮ ಮಹಿಳೆಯರ ತಂಡ, ಶ್ರುತಿ ಮತ್ತು ತಂಡ, ಗುರುಗ್ರಾಮ, ಕರ್ನಾಟಕ ಭವನ ಬಾಲಕಿಯರು, ನಾಡಪ್ರಭು ಕೆಂಪೇಗೌಡ ಫೌಂಡೇಷನ್ ತಂಡ, ಶ್ರೀಮತಿ ಪೂಜಾ ರಾವ್ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಅವರು ವಂದಿಸಿದರು.







# ಸಂಘದಿಂದ ಕೆ.ಎನ್.ಭಟ

**"ಸಂಘವನ್ನು ಪ್ರಾರಂಭದ ದಿನಗಳಿಂದ ನೋಡಿರುವ ಶ್ರೀ ಭಟ್ ಅವರು ಸಂಘ ಇಂದು ಇಷ್ಟೊಂದು ದೊಡ್ಡದಾಗಿ ಬೆಳೆದು ನಿಂತಿರುವುದನ್ನು ತುಂಬು ಹೃದಯದಿಂದ ಶ್ಲಾಘಿಸಿದರು. ದೆಹಲಿ ಕರ್ನಾಟಕ ಸಂಘ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ಅಧ್ಯಕ್ಷತೆಯಲ್ಲಿ ತುಂಬಾ ಚೆನ್ನಾಗಿ ನಡೆಯುತ್ತಿದೆ. ಸಂಘ ಇನ್ನೂ ದೊಡ್ಡದಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು"**

ದೆಹಲಿಗೆ 1969ರಲ್ಲಿ ಬಂದು ಇದೀಗ ಬೆಂಗಳೂರಿಗೆ ತೆರಳುತ್ತಿರುವ ಭಾರತ ಸರಕಾರದ ಮಾಜಿ ಆಡಿಶನಲ್ ಸಾಲಿಸಿಟರ್ ಜನರಲ್ ಮತ್ತು ಸುಪ್ರೀಂಕೋರ್ಟಿನ ಹಿರಿಯ ವಕೀಲರಾದ ಶ್ರೀ ಕೆ.ಎನ್. ಭಟ್ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಇದೇ ಏಪ್ರಿಲ್ 8ರಂದು ಆಯೋಜಿಸಿದ ಬೀಳ್ಕೊಡುಗೆ ಸಮಾರಂಭದಲ್ಲಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಮಾತಾಡುತ್ತಾ ಶ್ರೀ ಕೆ.ಎನ್. ಭಟ್ ಅವರು ಬಿಡುವಿನ ಸಮಯದಲ್ಲಿ ತನ್ನ ಅನುಭವದ ಪಾಠಗಳನ್ನು ಕಾನೂನು ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾಡುವ ಅಭಿಲಾಷೆಯನ್ನು ಅವರು





## ಟ್ ಅವರಿಗೆ ಅಭಿನಂದನೆ

ವ್ಯಕ್ತ ಪಡಿಸಿದರು. ವಕೀಲ ವೃತ್ತಿಯನ್ನು ಮುಂದುವರಿಸದಿದ್ದರೂ ಸಾರ್ವಜನಿಕ ಹಿತದೃಷ್ಟಿಯ ಸಂದರ್ಭ ಬಂದಾಗ ವಕಾಲತ್ತು ಮಾಡುತ್ತೇನೆ ಎಂದರು. ದೆಹಲಿ ಕರ್ನಾಟಕ ಸಂಘದೊಂದಿಗಿನ ತಮ್ಮ ಒಡನಾಟವನ್ನು ಹಂಚಿಕೊಳ್ಳುತ್ತ 1998ರಲ್ಲಿ ದೆಹಲಿ ಕರ್ನಾಟಕ ಸಂಘವು ನೀಡಿದ 'ವಿಶಿಷ್ಠ ಕನ್ನಡಿಗ' ಪ್ರಶಸ್ತಿಯನ್ನು ಸ್ಮರಿಸಿದರು. ಸಂಘವನ್ನು ಪ್ರಾರಂಭದ ದಿನಗಳಿಂದ ನೋಡಿರುವ ಶ್ರೀ ಭಟ್ ಅವರು ಸಂಘ ಇಂದು ಇಷ್ಟೊಂದು ದೊಡ್ಡದಾಗಿ ಬೆಳೆದು ನಿಂತಿರುವುದನ್ನು ತುಂಬು ಹೃದಯದಿಂದ ಶ್ಲಾಘಿಸಿದರು. ದೆಹಲಿ ಕರ್ನಾಟಕ ಸಂಘದಲ್ಲಿ ಶ್ರೀ ವಸಂತ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ತುಂಬಾ ಚೆನ್ನಾಗಿ ನಡೆಯುತ್ತಿದೆ. ಸಂಘ ಇನ್ನೂ ದೊಡ್ಡದಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಶ್ರೀ ರವೀಂದ್ರ ಭಟ್ ಅವರು ಮಾತನಾಡುತ್ತ ಶ್ರೀ ಕೆ.ಎನ್. ಭಟ್ ಅವರು ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯದ ಜೊತೆಗೆ ಸಾಹಿತ್ಯಿಕ ಹಾಗೂ ಪ್ರಾದೇಶಿಕ ವಿಷಯಗಳ ಸಂಬಂಧವನ್ನು ಕೂಡಾ ಆಳವಾಗಿ ಅರಿತಿದ್ದಾರೆ ಎಂದು ಹೇಳಿದರು. ಪ್ರಾರಂಭದಲ್ಲಿ ಶ್ರೀ ಈ.ಸಿ. ವಿದ್ಯಾಸಾಗರ್, ಅಡ್ವೋಕೇಟ್ ಅವರು ಶ್ರೀ ಕೆ.ಎನ್. ಭಟ್ ಅವರ ಸಾಧನೆಗಳ ಕುರಿತು ಸ್ಥೂಲವಾಗಿ ವಿವರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತ ಶ್ರೀ ಕೆ.ಎನ್. ಭಟ್ ಅವರು ದೆಹಲಿ ಕರ್ನಾಟಕ ಸಂಘದ ಎಲ್ಲ ಸಂದರ್ಭಗಳಲ್ಲಿಯೂ ಮಾಡಿದ ಮಾರ್ಗದರ್ಶನವನ್ನು ಈ ಸಂದರ್ಭದಲ್ಲಿ ಅವರು ಸ್ಮರಿಸಿದರು. ಅ

***ಅಭಿಮತ ವರದಿ***



**ಕುಮಾರಿ ಸ್ವಾತಿ ಲಕ್ಷ್ಮೀನಾರಾಯಣ ಹೆಗಡೆ ಅವರಿಗೆ ಸಂಘದಿಂದ ವಿದ್ಯಾರ್ಥಿ ವೇತನ**

ಕರ್ನಾಟಕದಲ್ಲಿ ಪಿ.ಯು.ಸಿ.ಯಲ್ಲಿ ರ್‍ಯಾಂಕ್ ಗಳಿಸಿ ಉತ್ತೀರ್ಣಗೊಂಡು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ದೆಹಲಿಯ ಪ್ರತಿಷ್ಠಿತ ಶ್ರೀರಾಮ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಕು. ಸ್ವಾತಿ ಲಕ್ಷ್ಮೀ ನಾರಾಯಣ ಹೆಗಡೆ ಅವರಿಗೆ ಸಂಘದಿಂದ ರೂ. 25,000/- ವಿಶೇಷ ವಿದ್ಯಾರ್ಥಿ ವೇತನ ನೀಡಿ ಪುರಸ್ಕರಿಸಲಾಯಿತು. ಇದೇ ಸಂದರ್ಭದಲ್ಲಿ ಪ್ರೋತ್ಸಾಹ ರೂಪದಲ್ಲಿ ಸಂಘದ ಅಧ್ಯಕ್ಷರು ವೈಯಕ್ತಿವಾಗಿ ರೂ.10,000/- ನೀಡಿದರು.








# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಿಂದ ನ್ಯಾಯವಾದಿ ಶ್ರೀ ಕೆ.ಎನ್.ಭಟ್ ಅವರಿಗೆ ಬೀಳ್ಕೊಡುಗೆ

ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಕೆ.ಎನ್. ಭಟ್ ಅವರನ್ನು ನಾನು ಕಂಡದ್ದು ಕೇವಲ ನ್ಯಾಯವಾದಿಯಾಗಿ ಅಲ್ಲ, ದೆಹಲಿಯ ಕನ್ನಡದ ನ್ಯಾಯಮೂರ್ತಿಯಾಗಿ ಎಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಅವರು ಹೇಳಿದರು.

ಅವರು ಇದೇ ಏಪ್ರಿಲ್ 24ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಗಳಾದ ಶ್ರೀ ಕೆ.ಎನ್. ಭಟ್ ಅವರ 'ಬೀಳ್ಕೊಡುಗೆ ಸಮಾರಂಭ' ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕರ್ನಾಟಕ ಸಂಘದಲ್ಲಿ ಉಂಟಾಗುತ್ತಿದ್ದ ಜಟಿಲ ಸಮಸ್ಯೆಗಳನ್ನು, ತಾತ್ವಿಕ ಸಂಘರ್ಷಗಳನ್ನು ಪರಿಹರಿಸಿ ಕನ್ನಡವರನ್ನು ಮತ್ತೊಮ್ಮೆ ಒಂದುಗೂಡಿಸುತ್ತಿದ್ದ ಕೀರ್ತಿ ಕೆ. ಎನ್. ಭಟ್ ಅವರದ್ದು. ತಿಳಿಹಾಸ್ಯದ ಮೂಲಕ ಅನೇಕ ಗಂಭೀರ ವಿಚಾರಗಳನ್ನು ಸಮಾಜದ ಮುಂದಿಟ್ಟವರು. ಇವರ ದೀರ್ಘಕಾಲದ ಅನುಭವವನ್ನು ಇಂದಿನ ಯುವ ಪೀಳಿಗೆಯು ಬಳಸಿಕೊಳ್ಳುವಂತಾಗಬೇಕು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ವೆಂಕಟಾಚಲ ಜಿ. ಹೆಗಡೆ ಅವರು ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಯಾದ ಕೆ.ಎನ್. ಭಟ್ ಅವರು ತಮ್ಮ ವೃತ್ತಿಯೊಂದಿಗೆ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಕ್ಕಾಗಿ ಅಪಾರ ಸೇವೆಗೈದವರು. ಅನೇಕ ಗಣ್ಯರೊಂದಿಗೆ ನಂಟು ಹೊಂದಿದ್ದ ಭಟ್ ಅವರು ಸರಳಜೀವಿ, ಸ್ನೇಹಪ್ರೇಮಿ ಮಾತ್ರವಲ್ಲ, ಒಳ್ಳೆಯ ಬರಹಗಾರರು, ಪುಸ್ತಕ ಪ್ರೇಮಿಯೂ ಕೂಡ ಹೌದು. 1986ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸೇವೆ ಆರಂಭಿಸಿದ ಇವರನ್ನು ಸರ್ವೋಚ್ಚ ನ್ಯಾಯಾಲಯವು 1996ರಲ್ಲಿ ಅಡಿಷನಲ್ ಸಾಲಿಟರ್ ಜನರಲ್ ಆಗಿ ಆಯ್ಕೆ ಮಾಡಿರುವುದು ಇವರ ದಕ್ಷತೆ ಹಾಗೂ ಕಾರ್ಯಕ್ಷಮತೆಗೆ ಸಂದ ಗೌರವ. ಇವರ ಸುಮಾರು 50 ವರ್ಷಗಳ ಸಾಧನೆಗಳು ಕನ್ನಡಿಗರಿಗೆ ಆದರ್ಶವಾದುದು ಎಂದು ಹೇಳಿದರು.

ಸಮಾರಂಭದ ಇನ್ನೊರ್ವ ಅತಿಥಿಯಾಗಿದ್ದ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಗಳಾದ ಶ್ರೀ ಈ.ಸಿ. ವಿದ್ಯಾಸಾಗರ್ ಅವರು ಮಾತನಾಡುತ್ತ ದೇಶ ಕಂಡ ಮೇಧಾವಿ ನ್ಯಾಯಾವಾದಿಗಳಲ್ಲಿ ಕೆ.ಎನ್. ಭಟ್ ಅವರು ಒಬ್ಬರು ಎಂಬುವುದು ಕನ್ನಡಿಗರಾದ ನಮಗೆಲ್ಲ ಹೆಮ್ಮೆಯ ಸಂಗತಿ. ಕಾನೂನಿಗೆ ಸಂಬಂಧಪಟ್ಟ ಕ್ಲಿಷ್ಟವಾದ ವಿಚಾರಗಳನ್ನು ಸರಳವಾಗಿ ವಿಶ್ಲೇಷಿಸಿ ಜನರಿಗೆ ಅರ್ಥವಾಗುವಂತೆ ಮಾಡಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಕಾಸರಗೋಡಿನಲ್ಲಿ ಹುಟ್ಟಿದ ಭಟ್ ಅವರು ಮೈಸೂರಿನಲ್ಲಿ ಕಾನೂನು ಪದವಿ ಪಡೆದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸೇವೆಯನ್ನು ಆರಂಭಿಸಿದವರು. ಬಳಿಕ ದೆಹಲಿಯ ಉಚ್ಚ ನ್ಯಾಯಾಲಯದಲ್ಲಿ ಸೇವೆಗೈದು ನಂತರ ಸರ್ವೋಚ್ಚ ನ್ಯಾಯಾಲಯದಲ್ಲಿ ಅವರು ಸಲ್ಲಿಸಿದ ಸೇವೆ ಮಹತ್ತರವಾದುದು. ಅಲ್ಲದೆ ಇಂದು ದೆಹಲಿಯಲ್ಲಿರುವ ಯಶಸ್ವಿ ಕನ್ನಡ ನ್ಯಾಯಾವಾದಿಗಳಿಗೆ ಮಾರ್ಗದರ್ಶನವನ್ನು ಮಾಡಿದ್ದಾರೆ ಎಂದರು.

ಕೆ.ಎನ್. ಭಟ್ ಅವರನ್ನು ಸಂಸ್ಥೆಯ ಪರವಾಗಿ ಪುಷ್ಪಗುಚ್ಛ, ಶಾಲು ಹಾಗೂ ಸ್ಮರಣಿಕೆ ನೀಡಿ ಗೌರವಪೂರ್ವಕವಾಗಿ ಅಭಿನಂದಿಸಲಾಯಿತು.

ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ ಕೆ. ಎನ್. ಭಟ್ ಅವರು 1969ರಲ್ಲಿ ದೆಹಲಿಗೆ ಬಂದ ನಾನು ಆ ಕಾಲದಲ್ಲಿಯೇ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕರ್ನಾಟಕ ಸಂಘದ ಜೊತೆ ಒಳ್ಳೆಯ ಒಡನಾಟವನ್ನು ಹೊಂದಿದ್ದೆ. ಸುಮಾರು 50 ವರ್ಷಗಳ ಕಾಲ ಸರ್ವೋಚ್ಚ ನ್ಯಾಯಾಲಯದ ಕಾರ್ಯಕಲಾಪಗಳನ್ನು ಬಹಳ ಹತ್ತಿರದಿಂದ ಕಂಡಿದ್ದೇನೆ. ನಾನು ಕಾನೂನು ಪದವಿ ಕಲಿಯುವಾಗ ಬೋಧನೆಯು ಅಂತಹ ಪರಿಣಾಮಕಾರಿಯಾಗಿರಲಿಲ್ಲ, ಆದರೆ ಇಂದು ಒಳ್ಳೆಯ ಶಿಕ್ಷಣ ವ್ಯವಸ್ಥೆ ಹಾಗೂ ಸೌಕರ್ಯಗಳಿವೆ. ಇದರ ಸದುಪಯೋಗವನ್ನು ಎಲ್ಲರೂ ಪಡೆಯುವಂತಾಗಬೇಕು. ಜೊತೆಗೆ ದೆಹಲಿ ಕನ್ನಡಿಗರ ಸಹೃದಯತೆಯನ್ನು, ಬಾಂಧವ್ಯವನ್ನು ನಾನೆಂದಿಗೂ ಮರೆಯಲಾರೆ ಎಂದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ತಾರಾ ರಮೇಶ, ವ್ಯವಸ್ಥಾಪಕರಾದ ಶ್ರೀ ಶಿವಾನಂದ ಸಿರ್ಸಿಕರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್. ಡಿ. ಶ್ರೀನಿವಾಸ್, ಶ್ರೀ ಸಿ.ಎಂ. ನಾಗರಾಜ, ಶ್ರೀ ಶ್ರೀಹರಿ, ಶ್ರೀ ಬಸವರಾಜ್ ವಿ. ಜ್ಯೋತೆಪ್ಪ, ಶಾಲಾ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಎನ್. ವಿಜಯಕುಮಾರಿ ಅವರು ಹಾಗೂ ನ್ಯಾಯವಾದಿಗಳು, ಶಿಕ್ಷಕರು ಮತ್ತು ಅನೇಕ ಕನ್ನಡಿಗರು ಉಪಸ್ಥಿತರಿದ್ದರು. ಕು. ಶ್ರೇಷ್ಠಾ ಪ್ರಾರ್ಥಿಸಿದರು. ಸಂಸ್ಥೆಯ ಉಪಾಧ್ಯಕ್ಷರಾದ ಪ್ರೊ ಕೆ.ಆರ್. ರಾಮಮೂರ್ತಿ ಅವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಗೌರವ ಖಜಾಂಚಿ ಶ್ರೀ ಜಿ.ಎಂ. ಹನುಮೇಗೌಡ ವಂದಿಸಿದರು. ಅ

***ಅಭಿಮತ ವರದಿ***

# ತಾಯ್ತನದ ಸಂಕಲ್ಪದ ಸಾಲುಗಳಿರುವ ಕವಿತೆಗಳು

ನನ್ನ ಪ್ರೀತಿಯ ಗೆಳತಿ ಅಹಲ್ಯಾಚಿಂತಾಮಣಿ ಅವರ 'ಅಕವಿತೆ' ನನ್ನ ಕೈಗೆ ಸಿಕ್ಕಾಗ ಸಿಕ್ಕಾಪಟ್ಟೆ ಸಂತೋಷ! ಯಾಕೆಂದರೆ ಕನ್ನಡ ಕವಿತೆಗಳನ್ನು ಓದುವುದು ನನಗೆ ಬಹಳ ಇಷ್ಟವಾದ ಕೆಲಸ. ಆದರೆ ಈ ಕವಿತೆಗಳನ್ನು ಓದುತ್ತಾ ಓದುತ್ತಾ, ವಿಮರ್ಶೆಗಿಂತ ವಿಸ್ಮಯವೇ ಜಾಸ್ತಿಯಾಗಿ, ಅವರ ಭಾಷೆ, ಸಾಹಿತ್ಯ, ಕಾವ್ಯದ ಛಂದಸ್ಸಿಗೆ ಮಾರುಹೋದೆ.

ಸುಪ್ತ ಮನಸ್ಸಿನಲ್ಲಿ ಬರುವ ಅಥವಾ ಹುದುಗಿರುವ ಆಸೆಗಳು, ಸಂದೇಹಗಳು, ಭಯಗಳು ಇತ್ಯಾದಿಗಳೇ ಕನಸುಗಳಾಗಿ ಬರುವುದನ್ನು 'ಕನಸು' ಕವಿತೆಯಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ಪ್ರಕೃತಿಯಲ್ಲಿ ನೋಡುವ ಏರುಪೇರುಗಳು, ಸುಳಿಗಳು ಹಾಗೂ ಮನದಾಳದಲ್ಲಿ ಹರಿಯುವ ಸುಳಿಗಳು, ಎರಡನ್ನೂ ಗುರುತಿಸಿ ಬರೆದಿರುವ ಕವನ 'ಸುಳಿಗಳ ಸೆಲೆ' ನಮ್ಮ ಹೃದಯಗಳನ್ನು ಆಯಸ್ಕಾಂತದಂತೆ ಸೆಳೆಯುತ್ತದೆ. 'ಪ್ರಾಣವಾಯು', 'ಹಸಿರು ಉಸಿರು' ಎಂಬ ಕವಿತೆಗಳಲ್ಲಿ ಪ್ರಕೃತಿಯ ವಿಶೇಷತೆ ಮತ್ತು ಉಪಯುಕ್ತತೆಯನ್ನು ಎತ್ತಿ ಹಿಡಿದಿರುವ ಸಾಹಸ. ಇದೇ ಮಾದರಿಯ, ಪರಿಸರದ ಕಾಳಜಿಯನ್ನು ಎತ್ತಿ ತೋರಿಸುವ ಮತ್ತೆರಡು ಸುಂದರ ಕವನಗಳು 'ಉರುಳುತ್ತಿರುವ ತರುಗಳು' ಹಾಗೂ 'ಪ್ರಚಲಿತ ಪರಿಸರ'.

'ಆತ್ಮಹತ್ಯೆ' ಚಿಕ್ಕದಾದ ಚೊಕ್ಕಟವಾದ, ಅರ್ಥಗರ್ಭಿತವಾದ ಪುಟ್ಟ ಕವನ. ಸಾಕಷ್ಟು ಪಾಠ ಹೇಳುತ್ತದೆ. 'ಅನಂತ' ಕವಿತೆಯಲ್ಲಿ ಬರುವ ಐದನೆಯ ಭಾಗ ಅತ್ಯಂತ ಸುಂದರವಾಗಿ ಬಂದಿದೆ–

"ಪ್ರಿಯ ಎಲೆಯೇ ಅಲುಗಾಡದಿರು
ಇದೇ ರೀತಿ ತಲೆ ಎತ್ತಿ ನಿಂತಿರು
ನೀನು ಅಲುಗಾಡಿದರೆ ನಾನು ಮಣ್ಣಲ್ಲಿ ಬಿದ್ದು ಹೋಗುತ್ತೇನೆ"

ಈ ಅಸ್ಥಿರ ಬದುಕು ಎಷ್ಟು ನಾಜೂಕಾಗಿದೆ. ಯಾವಾಗ ಬೇಕಾದರೂ ಬಿದ್ದು ಹೋಗಬಹುದು. ಆದರೂ ಈ ಅಭಿನಿವೇಪ–ಬದುಕನ್ನು ಗಟ್ಟಿಯಾಗಿ ಹಿಡಿದು ಇಟ್ಟುಕೊಳ್ಳುವ ಆಸೆ. ಎಂತಹ ವಿಡಂಬನೆ! 'ಅಮ್ಮನ ಅಕ್ಷರಮಾಲೆ' ಹಾಗೂ 'ಅಮ್ಮನ ಉತ್ತರ' ಈ ಎರಡೂ ಕವಿತೆಗಳು ತಾಯ್ತನದ ಬಾಂಧವ್ಯವನ್ನು ಎತ್ತಿ ತೋರಿಸಲು, ಓದುತ್ತಾ ಓದುತ್ತಾ ಕಣ್ಣುಗಳು ಮಂಜಾಗುತ್ತವೆ.

'ಹಾದಿ'–ಬಾಳಿನ ಪಯಣ. ನಾವು ಹೇಗೆ ನಡೆದರೆ ಹಾಗೆ. ನೆಟ್ಟಗಿದ್ದರೆ ನೆಟ್ಟಗೆ, ವಕ್ರವಾದರೆ ವಕ್ರ. ಇದನ್ನು ಅಹಲ್ಯಾ ಅವರು ಚೆನ್ನಾಗಿ ಬಿತ್ತಿಸಿದ್ದಾರೆ! 'ಕುಬ್ಜ ಮಹಾಕಾಯ' ಇಂದಿನ ಸಮಾಜದ ವಿಕಾರತೆಯನ್ನು ಕನ್ನಡಿಯಂತೆ ಎತ್ತಿ ತೋರಿಸುತ್ತದೆ. ಯಾವ ಹುತ್ತದಲ್ಲಿ ಯಾವ ಹಾವೋ!? 'ಯುಗಾಂತರ' ದಲ್ಲಿ ಹಾಸ್ಯದ ಲೇಪನ!

'ಬದುಕಿನ ಪಂಕ್ತಿಗಳು'– ಈ ಕವನದ ಸಾಲುಗಳು

ಸಾಕ್ರೇಟೀಸ್‌ನಂತೆ ಬದುಕೋಣ
ಅನುಭವದ ಅನುಭಾವ ಅವನ ಮಾತು
ಮಾತುಗಳು ಸಿಡಿಲಾಗಿ ಯೋಚನೆಗಳು
ಮಿಂಚಾಗಿ ಯುರೇಕ ! ಯುರೇಕ ಎಂದು
ಕೂಗೋಣ !"

ಈ ಸಾಲುಗಳಲ್ಲಿ ಅಡಗಿರುವುದು ಸಕಾರಾತ್ಮಕ ಉದ್ದೇಶ, ಮನುಷ್ಯ ತನ್ನೆಲ್ಲಾ ಸಂಕಷ್ಟಗಳನ್ನು ಎದುರಿಸುವ ಛಲವನ್ನು ಎತ್ತಿ ತೋರಿಸುತ್ತದೆ.

'ಭ್ರೂಣ ಹತ್ಯೆ'–
'ಎಷ್ಟೋ ಬಗೆ ರಸ ಬೆರಸಿ ಪಂಚೇಂದ್ರಿಯಗಳಿಗೆ
ರುಚಿಕೊಟ್ಟು ಬಸಿರನಾದರಿಸುತಿಹರು




ಯಾವ ಮುಳ್ಳಿನ ಹಾದಿ ತೆರದಿರುವುದೋ
ಹೆಣ್ಣಾದರೆ ಬಲಿಕೊಡುವೆನು ಎನ್ನುವರವರು
ಮುಂದಾವ ಭೀತಿಯ ಕಂದರ;'
ಅಬ್ಬ! ಎಂತಹ ಸಾಲುಗಳಿವು.

'ತಾಯಿಯಾಗಿಯೇ ರಕ್ಷಿಸುವೆ ಹೆಣ್ಣನ್ನು
ಬಯಕೆಯ ಹಣತೆ ಹಚ್ಚಿ ಹೆಣ್ಣಿನ
ಬಾಳಿಗೆ ಬೆಳಕ ನೀಡುವೆನು'

ತಾಯ್ತನಕ್ಕೆ ಒಂದು ಸಂಕಲ್ಪದಂತಿದೆ ಈ ಸಾಲುಗಳು! ಈ ಕವಿತೆಯನ್ನು ಓದಿ ಮುಗಿಸಿದಾಗ ಕಣ್ಣಂಚಿನಲ್ಲಿ ಎರಡು ಹನಿಗಳು ಕಾಣಿಸಿಕೊಂಡು, ಎದೆ ಭಾರವಾಗಿ 'ಅಬ್ಬಾ ಹೆಣ್ಣೇ' ಎಂದು ಹೃದಯ ಉಲಿಯುವುದು ಸಹಜ. ಇಂದಿನ ಗಡಿಬಿಡಿ ಜೀವನದಲ್ಲಿ ಖಂಡಿತ ಯಾರಿಗೂ, ಯಾವುದಕ್ಕೂ ಸಮಯವೇ ಇಲ್ಲ, ನಿಜ ಎಂದೆನಿಸಿತು 'ಸಮಯವೇ ಇಲ್ಲ' ಕವಿತೆ ಓದಿದಾಗ. 'ಯಾತ್ರೆ', 'ಹಿಂದೆ–ಮುಂದೆ', 'ಸತ್ಯ–ಮಿಥ್ಯ', 'ವಾರ್ತೆ', 'ಫಲವುಂಡು', 'ಆಸೆಯ ಫಲ', 'ಮೋಜು'–ಈ ಕವನಗಳ ತುಣುಕುಗಳಲ್ಲಿ ಘಹನವಾದ ವಿಚಾರ ತುಂಬಿಲ್ಲದಿದ್ದರೂ, ಹಗುರವಾಗಿ ತೇಲುತ್ತಾ ಮನಸ್ಸಿಗೆ ಮುದ ನೀಡಬಲ್ಲದು.

'ಪಾಚಿ' ಪದ್ಯ ನಿಜಕ್ಕೂ ಅಹಲ್ಯಾ ಅವರ ಸಸ್ಯವಿಜ್ಞಾನ, ಸಂಶೋಧನೆಗೆ ಒಂದು ಕಾವ್ಯರೂಪದ ಮೆರುಗನ್ನು ಕೊಟ್ಟಿದೆ ಎನ್ನಬಹುದು. 'ವಿಸ್ಮಯ'–ಅಬಲೆಯರಿಗೆ ಅವರ ಬಲವನ್ನು ತೋರಿಸಿ ಮುನ್ನಡೆಸಿರುವ ಶಕ್ತಿ. 'ಮತ್ತೊಂದು ಅಕವಿತೆ'–ಮನುಷ್ಯರಿಗೆ ಇತ್ತೀಚಿನ ದಿನಗಳಲ್ಲಿ ಆವರಿಸುವ ಸಕಲ ರೋಗಗಳ ಬಗ್ಗೆ ಒಂದು ವಿಡಂಬನೆಯಂತಿದೆ. ನಿಜಕ್ಕೂ ಇದೊಂದು ಭಯಂಕರ ಸತ್ಯ. ಅಹಲ್ಯಾ ಅವರ 'ಅಕವಿತೆ' ಓದಿದಾಗ, ಮನಸ್ಸು, ಹೃದಯ ಯಾವುದೋ ಲೋಕಕ್ಕೆ ಜಾರಿ ಹೋಗುತ್ತದೆ. ಅ

*ಕಲಾಚಾರಿ, ಮೈಸೂರು*




# ಜನಕಪುರಿ ಕನ್ನಡಕೂಟದಲ್ಲಿ ರಾಮ ನವಮಿ ಆಚರಣೆ

ಜನಕಪುರಿ ಕನ್ನಡಕೂಟವು ಇದೇ ಏಪ್ರಿಲ್ 15ರಂದು ರಾಮನವಮಿ ಪೂಜೆಯನ್ನು ಹಮ್ಮಿಕೊಂಡಿತ್ತು. ಕೂಟದ ಮಾಜೀ ಅಧ್ಯಕ್ಷರಾದ ಶ್ರೀ ಬಿ.ಎಸ್. ರಾಮಕೃಷ್ಣ ಸಪತ್ನೀಕರಾಗಿ ಕೂಟದ ಎಲ್ಲಾ ಸದಸ್ಯರ ಪರವಾಗಿ ಪೂಜೆಯಲ್ಲಿ ಪಾಲ್ಗೊಂಡರು. ಶ್ರೀ ಅಶೋಕ್ ಹನಮ್‌ಸಾಗರ್ ಅವರು ಮಂತ್ರೋದ್ಗಾರದೊಂದಿಗೆ ಪೂಜೆಯನ್ನು ನೆರವೇರಿಸಿದರು. ವಿವಿಧ ರೀತಿಯ ಹೂವು, ಬಾಳೆಗಿಡದ ಕಂಬದಿಂದ ಅಲಂಕರಿಸಿದ ಮಂಟಪದಲ್ಲಿ ಶ್ರೀರಾಮನ ಫೋಟೋ ಇಟ್ಟು ಪೂಜಿಸಿ, ಫಲ ತಾಂಬೂಲ, ಕೋಸಂಬರಿ, ಪಾನಕಗಳ ನೈವೇದ್ಯ ಮಾಡಿ ಎಲ್ಲರಿಗೂ ಸುಖ ಶಾಂತಿ ಲಭಿಸುವಂತೆ ಪ್ರಾರ್ಥಿಸಲಾಯಿತು. ಜನಕಪುರಿ ಮಹಿಳಾ ಮಂಡಳಿಯಿಂದ ಭಜನೆ ಮತ್ತು ಭಕ್ತಿಗೀತೆಗಳನ್ನು ಹಾಡಲಾಯಿತು. ದೆಹಲಿಗೆ ಆಗಮಿಸಿದ್ದ ಹೆಸರಾಂತ ಬರಹಗಾರ ಡಾ. ಕೆ.ಪಿ. ಪುತ್ತುರಾಯ ಅವರಿಂದ ಹಾಸ್ಯಭರಿತ ರಸಮಯ ಕಾರ್ಯಕ್ರಮ ನಡೆಯಿತು. ಶ್ರೀ ಬಿ.ಕೆ. ಬಸವರಾಜ್ ಅವರು ಈ ಕಾರ್ಯಕ್ರಮ ನಡೆಸಲು ಸಹಕರಿಸಿದರು. ಡಾ. ಈಶ್ವರ್ ಆಚಾರ್ಯ ಅವರು ಊಟದ ವ್ಯವಸ್ಥೆಯನ್ನು ಮಾಡಿದ್ದರು. ಕೂಟದ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ಜನಕಪುರಿ ಮಹಿಳಾ ಮಂಡಳಿಗೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಅ

*ಶೇಷಗಿರಿ ನಾಯಕ್*

# ಡಾ. ಗುರುರಾಜ್ ಸಂಗೊಂದಿಮಠ ಅವರೊಂದಿಗೆ ಸಂದರ್ಶನ

**ಡಾ. ಗುರುರಾಜ್ ಸಂಗೊಂದಿಮಠ** ಅವರು ಕಿರಿಯ ವಯಸ್ಸಿನ ಮಗುವಿನ ಬೆನ್ನುಮೂಳೆಯ ತೊಂದರೆಯನ್ನು ಶಸ್ತ್ರ ಚಿಕಿತ್ಸೆಯ ಮೂಲಕ ನಿವಾರಿಸಿ ಬೆನ್ನುಮೂಳೆ ಚಿಕಿತ್ಸೆಯಲ್ಲಿ ವಿಶ್ವದಲ್ಲಿಯೇ ಅಚ್ಚರಿಯೆನಿಸುವ ಚರಿತ್ರಾರ್ಹ ಸಾಧನೆ ಮಾಡಿದ್ದಾರೆ. ಭಾರತೀಯ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ದಾಖಲೆ ನಿರ್ಮಿಸಿದ ಇವರು ಶ್ರೀ ಮಲ್ಲಿಕಾರ್ಜುನ್ ಸಂಗೊಂಧಿಮಠ್ ಮತ್ತು ಶ್ರೀಮತಿ ಪ್ರೇಮಾ ಸಂಗೊಂಧಿಮಠ್ ಅವರ ಸುಪುತ್ರ. ಗುಲ್ಬರ್ಗಾದ ಸಗರ್ ಹಳ್ಳಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಪ್ರೌಢ ಶಿಕ್ಷಣ ಮತ್ತು ಕಾಲೇಜು ಶಿಕ್ಷಣವನ್ನು ಧಾರವಾಡದಲ್ಲಿ ಹಾಗೂ ಹುಬ್ಬಳ್ಳಿಯ ಕಿಮ್ಸ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣವನ್ನು ಪೂರೈಸಿದ್ದಾರೆ. ಇವರ ಪತ್ನಿ ಸುಮನ್ ಸಾಲಿಮಠ್ ಹಾಗೂ ಮಗ ಸಮರ್ಥ್  ಇವರೊಂದಿಗೆ ಪ್ರಸ್ತುತ ದೆಹಲಿಯಲ್ಲಿನ ವಸಂತಕುಂಜ್‌ನ ವಾಸಿಯಾಗಿದ್ದಾರೆ. ಪ್ರತಿಷ್ಠಿತ ಇಂಡಿಯನ್ ಸ್ಪೈನಲ್ ಇನ್‌ಜುರಿಸ್ ಸೆಂಟರ್‌ನಲ್ಲಿ ಬೆನ್ನು ಮೂಳೆ ಶಸ್ತ್ರ ಚಿಕಿತ್ಸೆ ಘಟಕದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಧರ್ಮ ಪತ್ನಿ ಅವರೂ ಕೂಡ ಇದೇ ಆಸ್ಪತ್ರೆಯಲ್ಲಿ  ವಿಕಿರಣ ಶಾಸ್ತ್ರಜ್ಞೆ (ರೇಡಿಯಾಲಜಿ ತಜ್ಞೆ) ಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರೊಂದಿಗೆ  ದೆಹಲಿ ಕರ್ನಾಟಕ ಸಂಘದ ಮುಖವಾಣಿ **"ಅಭಿಮತ"** **ಸಂಪಾದಕ ಮಂಡಳಿಯ ಎನ್.ಪಿ. ಚಂದ್ರಶೇಖರ್** ಅವರು ಸಂದರ್ಶನ **ಮಾಡಿದರು.** ಸಂದರ್ಶನದ ಆಯ್ದ ಭಾಗಗಳು ಅಭಿಮತದ ಓದುಗರಿಗೆ. . .



## ಬೆನ್ನುಮೂಳೆ ಚಿಕಿತ್ಸೆಗೆ ಭಾರತದಲ್ಲಿ ಸೌಲಭ್ಯಗಳು ಹೆಚ್ಚಾಗಬೇಕು

### –ಡಾ.ಗುರುರಾಜ್ ಸಂಗೊಂದಿಮಠ

**ಅಭಿಮತ :** ನಿಮ್ಮ ವೈದ್ಯಕೀಯ ಪದವಿ ಅಧ್ಯಯನ ಮಾಡಿದ್ದರ ಮತ್ತು ವೈದ್ಯಕೀಯ ವೃತ್ತಿಯಲ್ಲಿ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದೀರಿ ಎಂಬ ಬಗ್ಗೆ ಸ್ವಲ್ಪ ತಿಳಿಸಿಕೊಡಿ?

**ಡಾ. ಗುರುರಾಜ್ ಸಂಗೊಂದಿಮಠ :** ಹುಬ್ಬಳ್ಳಿಯ ಕಿಮ್ಸ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣವನ್ನು 1998 ರಿಂದ 2003ರವರೆಗೆ ನಡೆಸಿದೆ. ಆನಂತರ ಆರ್ಥೋಪೆಡಿಕ್ಸ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು 2005 ರಿಂದ 2008ರವರೆಗೆ ಸೆಂಟ್ ಜಾನ್ಸ್ ಬೆಂಗಳೂರಿನಲ್ಲಿ ಮುಗಿಸಿದೆ. ಆನಂತರ ಕೆಲವು ತಿಂಗಳು ಹುಬ್ಬಳ್ಳಿಯ ಕಿಮ್ಸ್ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸಿದೆ. ಅಖಿಲ ಭಾರತ ಮಟ್ಟದ ಪ್ರವೇಶ ಪರೀಕ್ಷೆಯಲ್ಲಿ ಎರಡನೇ ರ್‍ಯಾಂಕ್ ಪಡೆದು ಎಫ್.ಎನ್.ಬಿ (Fellowship of National Board) ಸ್ಪೈನ್ ಸರ್ಜರಿ (ಬೆನ್ನುಮೂಳೆ ಶಸ್ತ್ರ ಚಿಕಿತ್ಸೆ) ಯನ್ನು ಆಯ್ಕೆ ಮಾಡಿಕೊಂಡೆ. ಇದಾದ ನಂತರವೂ ಬೇರೆ ಬೇರೆ ಅನೇಕ ಫೆಲೋಷಿಪ್ ಕೋರ್ಸುಗಳನ್ನು ಭಾರತದಲ್ಲಿ ಮಾತ್ರವಲ್ಲದೇ ವಿದೇಶಿ ವಿಶ್ವವಿದ್ಯಾಲಯಗಳಿಂದಲೂ ಮುಗಿಸಿದ್ದೇನೆ.

**ಅಭಿಮತ :** ದೆಹಲಿಗೆ ನೀವು ಬಂದಿದ್ದು ಯಾವಾಗ? ಇಲ್ಲಿ ಕರ್ನಾಟಕ ಸಂಘದ ಜೊತೆಗಿನ ನಿಮ್ಮ ಒಡನಾಟ ಯಾವಾಗಿನಿಂದ ಪ್ರಾರಂಭವಾಯಿತು.?

**ಡಾ. ಗುರುರಾಜ್ ಸಂಗೊಂದಿಮಠ :** ನಾನು 2009ರಲ್ಲಿ ಇಂಡಿಯನ್ ಸ್ಪೈನಲ್ ಇನ್‌ಜುರಿಸ್ ಸೆಂಟರ್‌ನಲ್ಲಿ ಬೆನ್ನುಮೂಳೆ ಶಸ್ತ್ರ ಚಿಕಿತ್ಸೆ ವಿಭಾಗದಲ್ಲಿ ವೈದ್ಯನಾಗಿ ಸೇರಿಕೊಂಡೆ. ಅಂದಿನಿಂದಲೂ ಅಲ್ಲಿಯೇ ಸೇವೆ ಸಲ್ಲಿಸುತ್ತಿದ್ದೇನೆ. ಪ್ರಸುತ್ತ ಇದೇ ಘಟಕದಲ್ಲಿ ಮುಖ್ಯಸ್ಥನಾಗಿದ್ದೇನೆ. 2011ರಲ್ಲಿ ಶ್ರೀ ಚೆನ್ನು ಎಸ್. ಮಠದ ಅವರ ಸಂಪರ್ಕ ಆಯಿತು. ದೆಹಲಿ ಕರ್ನಾಟಕ ಸಂಘದ ಕುರಿತು ಅವರು ತಿಳಿಸಿದರು. ಅದಾದ ನಂತರ ಸಮಯ ಸಿಕ್ಕಾಗ ಬರತೊಡಗಿದೆ.

**ಅಭಿಮತ:** ದೆಹಲಿ ಕರ್ನಾಟಕ ಸಂಘದಲ್ಲಿ ಎಂದಿನಿಂದ ನೀವು ವೈದ್ಯಕೀಯ ಸಲಹೆ ನೀಡುತ್ತಿದ್ದೀರಿ? ದೆಹಲಿ ಕನ್ನಡಿಗರ ಜೊತೆಗೆ ನಿಮ್ಮ ಅನುಭವದ ಕುರಿತು ಒಂದೆರಡು ಮಾತುಗಳನ್ನು ಹೇಳಿ ?

**ಡಾ. ಗುರುರಾಜ್ ಸಂಗೊಂದಿಮಠ :** ನಾನು ಸಂಘದಲ್ಲಿ ಬೆನ್ನುಮೂಳೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಉಚಿತ ಸಲಹೆಗಳನ್ನು ನಮ್ಮ ಕನ್ನಡದ ಜನರಿಗೂ ಉಚಿತವಾಗಿ ನೀಡಬೇಕು  ಅಂತ ಬಯಸಿದೆ. ಅದಕ್ಕೆ ಸಂಘದ ಕಾರ್ಯಕಾರಿ ಸಮಿತಿ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿ ಪ್ರೋತ್ಸಾಹಿಸಿತು. 2014ರಿಂದ ಪ್ರತೀ ತಿಂಗಳು ಮೂರನೇ ಭಾನುವಾರ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬರುತ್ತಿದ್ದೇನೆ. ಈ ಸಂದರ್ಭ ನನಗೆ ಅತ್ಯಂತ ವಿಶಿಷ್ಟ ಅನುಭವಗಳನ್ನು ನೀಡಿತು. ಸಾಕಷ್ಟು ಜನ ಹೊರನಾಡ ಕನ್ನಡಿಗರ ಜೊತೆ ನನ್ನ ಒಡನಾಟ ಬೆಳೆದದ್ದು ನನಗೆ ಅತೀವ ಸಂತೋಷ ತಂದುಕೊಟ್ಟಿದೆ. ನನ್ನ ಒಬ್ಬ ದೂರದ ಸಂಬಂಧಿಯೊಬ್ಬರ ಪರಿಚಯ ಕೂಡಾ ಈ ಮೂಲಕವೇ ನನಗೆ ಆಯಿತು. ನಮ್ಮ ವೃತ್ತಿಯ ಒತ್ತಡದ ನಡುವೆ ಬಿಡುವು ಮಾಡಿಕೊಂಡು ನಮ್ಮ ತಾಯ್ನಾಡಿನ ಜನರ ಜೊತೆ ಬೆರೆಯುವುದಕ್ಕೆ ಮತ್ತು ಅವರಿಗೆ ಅಗತ್ಯ ಸಲಹೆ ನೀಡಲು ದೊರಕಿದ ಸದಾವಕಾಶ ನಿಜಕ್ಕೂ ತೃಪ್ತಿ ತಂದಿದೆ.

**ಅಭಿಮತ:**  ಸರ್ ಕಿರಿಯ ವಯಸ್ಸಿನ ಮಗುವಿನ ಬೆನ್ನುಮೂಳೆಯ ಸಮಸ್ಯೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ಬಗೆಹರಿಸಿ ಭಾರತ ದೇಶದ ವೈದ್ಯಕೀಯ ಚರಿತ್ರೆಯಲ್ಲಿಯೇ ಹೊಸ ದಾಖಲೆ ನಿರ್ಮಿಸಿದ ಕನ್ನಡಿಗರು ನೀವು ಎನ್ನುವುದನ್ನು ಹಲವು ಪತ್ರಿಕೆಗಳು ಮತ್ತು ಟಿ.ವಿ ಮಾಧ್ಯಮಗಳು ವರದಿ ಮಾಡಿವೆ. ಈ ಸಾಧನೆ ಬಗ್ಗೆ ತಿಳಿಸಿ ಸರ್.

**ಡಾ. ಗುರುರಾಜ್ ಸಂಗೊಂದಿಮಠ :** ಬೆನ್ನು ಮೂಳೆ ಕ್ಷಯ ರೋಗ (ಟಿ.ಬಿ.) ಭಾರತದಲ್ಲಿ ಒಂದು ಸಾಮಾನ್ಯ ರೋಗ. ಬೆನ್ನುಮೂಳೆಗೆ ಇದು ಸೋಂಕಿದ ಕೂಡಲೇ ರೋಗಿಯ ಬೆನ್ನುಮೂಳೆಯಲ್ಲಿ ವಕ್ರತೆಗೆ ಕಾರಣವಾಗುವ ಅಪಾಯವಿರುತ್ತದೆ. ಈ ರೀತಿಯ ವಕ್ರತೆ ತೀವ್ರವಾದಾಗ ರೋಗಿ ಪಾರ್ಶ್ವವಾಯು ಪೀಡಿತನಾಗುತ್ತಾನೆ. ಇತರೆ ಮುಂದುವರಿದ ದೇಶಗಳಿಗಿಂತಲೂ ಹೆಚ್ಚಾಗಿ ಅಭಿವೃದ್ಧಿಶೀಲ ದೇಶವಾಗಿರುವ ನಮ್ಮ ಭಾರತದಂತಹ ದೇಶಗಳಲ್ಲಿ ಈ ರೀತಿಯ ಬೆನ್ನುಮೂಳೆ ಕ್ಷಯರೋಗದ ಸಮಸ್ಯೆ ಅತೀ ಹೆಚ್ಚು ಕಂಡುಬರುತ್ತಿದೆ.

ಆದ ಕಾರಣ ಭಾರತದಲ್ಲಿ ಈ ರೋಗಕ್ಕೆ ಚಿಕಿತ್ಸೆಯೂ ಕೂಡಾ ಮುಂದುವರಿದ ದೇಶಗಳಿಗಿಂತಲೂ ಉತ್ತಮ ರೀತಿಯಲ್ಲಿ ಲಭ್ಯವಾಗುತ್ತಿದೆ. ಇದಕ್ಕಾಗಿ ಈ ಬೆನ್ನು ಮೂಳೆ ಕ್ಷಯ ರೋಗ (ಟಿ.ಬಿ.) ಚಿಕಿತ್ಸೆಗೆ ಇಡೀ ವಿಶ್ವವವೇ ಭಾರತದತ್ತ ನೋಡುತ್ತಿದೆ. ನನ್ನ ವೈಧ್ಯಕೀಯ ವೃತ್ತಿಯ ಗುರುತರ ಅನುಭವವೆಂದರೆ ಇಡೀ

ವಿಶ್ವದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಅತ್ಯಂತ ಕಿರಿಯ ವಯಸ್ಸಿನ ಅಂದರೆ ಒಂದು ವರ್ಷ ಒಂಬತ್ತು ತಿಂಗಳ ಮಗುವಿನ ಗೂನು ಬೆನ್ನನ್ನು ಶಸ್ತ್ರ ಚಿಕಿತ್ಸೆಯ ಮೂಲಕ ಸರಿಪಡಿಸಿದ್ದು. ಇಷ್ಟು ಚಿಕ್ಕ ವಯಸ್ಸಿನ ಮಕ್ಕಳ ಬೆನ್ನು ಮೂಳೆ ಕ್ಷಯರೋಗದಿಂದಾಗಿ ವಿರೂಪಗೊಂಡ ಗೂನು ಬೆನ್ನಿನ ವಕ್ರತೆಯನ್ನು ಸರಿಪಡಿಸುವ ಶಸ್ತ್ರ ಚಿಕಿತ್ಸೆ ಇದುವರೆವಿಗೂ ಭಾರತದಲ್ಲಿ ಮಾತ್ರವಲ್ಲ ಜಗತ್ತಿನ ಬೇರೆ ಯಾವ ದೇಶಗಳಲ್ಲೂ ನಡೆಸಿಲ್ಲ. ಶಸ್ತ್ರ ಚಿಕಿತ್ಸೆಯ ನಂತರ ಆ ಮಗು ನಡೆದಾಡಲು ಸಾಧ್ಯವಾಗಿದೆ. ಆರೋಗ್ಯಕರವಾಗಿದೆ. ಇಂತಹ ಅಪರೂಪದ ಸಾಧನೆಯಿಂದಾಗಿ ಮಾಧ್ಯಮಗಳು ಮತ್ತು ಪತ್ರಿಕೆಗಳು ನನ್ನ ಸಂದರ್ಶನವನ್ನು ನಡೆಸಿ ಈ ಮಹತ್ತರ ಸುದ್ದಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲೂ ಪ್ರಸಾರ ಮಾಡಿದವು. ಇದರಿಂದಾಗಿ ಬೆನ್ನುಮೂಳೆಯ ಶಸ್ತ್ರ ಚಿಕಿತ್ಸೆ ಕ್ಷೇತ್ರದಲ್ಲಿ ಭಾರತದ ಬಗೆಗೆ ಜಾಗತಿಕ ಮಟ್ಟದಲ್ಲಿ ಒಳ್ಳೆಯ ಅಭಿಪ್ರಾಯ ಮೂಡಲು ಸಾಧ್ಯವಾಯಿತು. ಇದು ನನಗೆ ಜೀವಮಾನದ ಸಾಧನೆಯೆಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತದೆ.

**ಅಭಿಮತ :** ಸರ್, ಇದುವರೆಗೆ ಎಷ್ಟು ದೇಶಗಳಿಗೆ ಭೇಟಿ ನೀಡಿದ್ದೀರಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆನ್ನು ಮೂಳೆ ತೊಂದರೆ ಮತ್ತು ಚಿಕಿತ್ಸೆ ನಮ್ಮ ದೇಶಕ್ಕೆ ಹೋಲಿಸಿದರೆ ಯಾವ ರೀತಿಯಲ್ಲಿ ಭಿನ್ನವಾಗಿದೆ.? ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಡಾ. ಗುರುರಾಜ್ ಸಂಗೊಂದಿಮಠ :** ಇದುವರೆಗೆ ನಾನು ಸುಮಾರು 35ಕ್ಕಿಂತಲೂ ಹೆಚ್ಚು ದೇಶಗಳನ್ನು ಸುತ್ತಿದ್ದೇನೆ. ಅಲ್ಲದೇ ಅಮೆರಿಕಾ, ಜಪಾನ್, ಹಾಂಕಾಂಗ್, ಇಟಲಿ, ಜರ್ಮನಿ ಮುಂತಾದ ಹನ್ನೆರಡಕ್ಕೂ ಹೆಚ್ಚು ದೇಶಗಳಲ್ಲಿ ಅಲ್ಲಿನ ಆಸ್ಪತ್ರೆಗಳಿಗೆ ಭೇಟಿ ನೀಡಿ ಹೆಚ್ಚು ಹೆಚ್ಚು ಅಲ್ಲಿನ ವೈದ್ಯರುಗಳ ಜೊತೆಯಲ್ಲಿ ಬೆನ್ನು ಮೂಳೆ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದಂತೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ಆ ದೇಶಗಳಿಗೆ ಹೋಲಿಸಿದಾಗ ನಮ್ಮ ದೇಶದಲ್ಲಿ ವೈದ್ಯಕೀಯ ಮೂಲ ಸೌಕರ್ಯಗಳು ನಿರ್ದಿಷ್ಟವಾಗಿ ಬೆನ್ನು ಮೂಳೆ ಚಿಕಿತ್ಸೆಗೆ ಸಂಬಂಧಿಸಿದ ಸೌಲಭ್ಯಗಳು ಬೆರಳೆಣಿಕೆಯಷ್ಟು ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿವೆ, ಆದರೆ ಸರಕಾರೀ ಆಸ್ಪತ್ರೆಗಳಲ್ಲಿ ಇನ್ನೂ ಸಾಕಷ್ಟು ಸೌಲಭ್ಯಗಳನ್ನು ಒದಗಿಸಬೇಕಾದ ಅಗತ್ಯವಿದೆ.

**ಅಭಿಮತ:** ಸರ್, ದೇಹದ ಆರೋಗ್ಯದಲ್ಲಿ ಸ್ನಾಯುಗಳು, ಮೂಳೆ ಮತ್ತು ಬೆನ್ನೆಲುಬು ಇತ್ಯಾದಿಗಳನ್ನು ಆರೋಗ್ಯಕರವಾಗಿ ಕಾಪಾಡಿಕೊಳ್ಳುವುದು ಮತ್ತು ಅವುಗಳಿಗೆ ಸಮಸ್ಯೆ ಎದುರಾದಾಗ ಯಾವ ರೀತಿಯ ಮುಂಜಾಗೃತೆ ವಹಿಸಬೇಕೆಂಬ ಬಗ್ಗೆ ಬಹುತೇಕ ಜನರಿಗೆ ತಿಳುವಳಿಕೆ ಕೊರತೆ ಇದೆ. ಹಾಗಾಗಿ ಈ ಕುರಿತು ಅರಿವು ಮೂಡಿಸುವಂತಹ ಕೆಲಸಗಳನ್ನು ಮಾಡಲು ನೀವೇನಾದರೂ ವಿಶೇಷ ಪ್ರಯತ್ನ / ಉಪನ್ಯಾಸ ಇತ್ಯಾದಿ ಮಾಡುತ್ತಿದ್ದೀರಾ?

**ಡಾ. ಗುರುರಾಜ್ ಸಂಗೊಂದಿಮಠ :** ಹೌದು ನೀವು ಹೇಳಿದಂತೆ ಅಭಿವೃದ್ಧ ದೇಶಗಳಿಗೆ ಹೋಲಿಸಿದರೆ ನಮ್ಮಂತಹ ಅಭಿವೃದ್ಧಿಶೀಲ ರಾಷ್ಟ್ರಗಳ ಜನರಲ್ಲಿ ಬೆನ್ನುಮೂಳೆ ಆರೋಗ್ಯದ ಬಗೆಗೆ ತಿಳುವಳಿಕೆಯ ಕೊರತೆ ಇದೆ. ಬೆನ್ನುಮೂಳೆ ತೊಂದರೆಗಳಿಗೆ ಸಂಬಂಧಪಟ್ಟಂತೆ ಜನರಲ್ಲಿ ಇಂದಿಗೂ ಮೂಢನಂಬಿಕೆಗಳು ಮತ್ತು ಹಳೆಯ ವೈದ್ಯ ಪದ್ಧತಿಗಳ ಮೂಲಕವೇ ಸಮಸ್ಯೆ ನಿವಾರಿಸಿಕೊಳ್ಳುವ ಮನೋಭಾವ ಇದೆ, ಹಾಗಾಗಿ ಅವರಿಗೆ ಸೂಕ್ತ ಸಮಯದಲ್ಲಿ ವೈದ್ಯರನ್ನು ಭೇಟಿ ಮಾಡಿ ಸಲಹೆ ಮತ್ತು ಚಿಕಿತ್ಸೆ ಪಡೆದುಕೊಳ್ಳಲು ಅವರು ಮುಂದೆ ಬರುತ್ತಿಲ್ಲ.

ಬೆನ್ನು ಮೂಳೆ ಸಮಸ್ಯೆ ಎದುರಾದ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ಅಗತ್ಯ ಸಲಹೆ ಪಡೆದುಕೊಂಡರೆ ಶೇಕಡಾ 90 ರಷ್ಟು ಜನ ಶಸ್ತ್ರ ಚಿಕಿತ್ಸೆಗೆ ಒಳಪಡುವ ಅಗತ್ಯವೇ ಬರಲಾರದು. ವೈದ್ಯರ ಸಲಹೆಯಿಂದಲೇ ಅವರ ಬೆನ್ನುನೋವು ಮತ್ತು ಬೆನ್ನಿಗೆ ಸಂಬಂಧಪಟ್ಟ ಇತರೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಇನ್ನುಳಿದ ಶೇಕಡಾ 10ರಷ್ಟು ಜನರಿಗೆ ಯಾವುದೇ ತೊಂದರೆಯಿಲ್ಲದ ಹಾಗೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ತಮ್ಮ ಕಾಯಿಲೆಯನ್ನು ವಾಸಿ ಮಾಡಿಕೊಳ್ಳಬಹುದಾದ ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳು ನಮ್ಮ ದೇಶದಲ್ಲಿ ಲಭ್ಯವಿವೆ. ಅಧುನಿಕ ಅರಿವಳಿಕೆ ವಿಧಾನದಿಂದಾಗಿ ಯಾವುದೇ ತೊಂದರೆಯಿಲ್ಲದಂತೆ ಸುರಕ್ಷಿತವಾಗಿ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಬಹುದಾಗಿದೆ. ಉದಾಹರಣೆಗೆ ಇತ್ತೀಚೆಗೆ ಒಬ್ಬ ರೋಗಿಯ ಹೃದಯದ ಕಾರ್ಯಕ್ಷಮತೆ ಶೇಕಡಾ 15ರಷ್ಟು ಮಾತ್ರ ಇದ್ದಂತಹ ಗಂಭೀರ ಪರಿಸ್ಥಿತಿಯಲ್ಲಿಯೂ ಅವರಿಗೆ ಇದ್ದ ಬೆನ್ನುಮೂಳೆಯ ಸಮಸ್ಯೆಗೆ ಶಸ್ತ್ರ ಚಿಕಿತ್ಸೆಯನ್ನು ನಡೆಸಿ ಯಶಸ್ವಿಯಾಗಿದ್ದೇವೆ.

ಬೆನ್ನುಮೂಳೆಯ ಸಮಸ್ಯೆಯಿಂದ ಬಾಧಿತರಾಗಿರುವ ಬಹುತೇಕ ಜನ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಸಲಹೆ ನೀಡಿದಾಗ ಹಿಂಜರಿಯುತ್ತಾರೆ. ಅವರಿಗೆ ಶಸ್ತ್ರ ಚಿಕಿತ್ಸೆಯ ನಂತರ ಏನಾಗುತ್ತೋ ಎಂಬ ಆತಂಕ ಕಾಡುತ್ತಿರುತ್ತದೆ. ಇದಕ್ಕಿರುವ ಉಪಾಯವೆಂದರೆ ಸಮಸ್ಯೆ ಪ್ರಾರಂಭಿಕ ಹಂತದಲ್ಲಿದ್ದಾಗಲೇ ಸರಿಯಾದ ಸಲಹೆ ಮತ್ತು ಚಿಕಿತ್ಸೆ ಪಡೆಯದೇ ನಂತರದ ದಿನಗಳಲ್ಲಿ ಸಮಸ್ಯೆಯನ್ನು ಉಲ್ಬಣ ಮಾಡಿಕೊಳ್ಳುತ್ತಾರೆ. ಹೀಗೆ ಶಸ್ತ್ರ ಚಿಕಿತ್ಸೆಗೆ ಒಳಪಡದೇ ಇರುವವರಿಗೆ ಅವರ ಸಮಸ್ಯೆ ದೊಡ್ಡದಾಗಿ ಮುಂದೆ ಪಾರ್ಶ್ವವಾಯು, ಮಲಮೂತ್ರ ವಿಸರ್ಜನೆಯ ಸಮಸ್ಯೆ ಎದುರಾಗುವ ಸಂಭವವಿರುತ್ತದೆ.

ಅದಕ್ಕಾಗಿ ಯಾರಿಗಾದರೂ ಕಾಲುಗಳ ನರಗಳಲ್ಲಿ ನೋವು, ದೌರ್ಬಲ್ಯ, ಸ್ಪರ್ಶ ಹೀನತೆ ಮತ್ತು ಬೆನ್ನೆಲುಬಿನ ನೋವು ಕ್ರಮೇಣ ತೀವ್ರಗೊಳ್ಳುತ್ತಿದ್ದರೆ ಅಂತವರು ತಕ್ಷಣ ಬೆನ್ನು ಮೂಳೆ ವಿಶೇಷಜ್ಞರನ್ನು ಸಂಪರ್ಕಿಸಿ ಸಲಹೆ ಪಡೆಯುವುದು ಸೂಕ್ತ.

ಭಾರತದಲ್ಲಿ ಜನರಿಗೆ ಬೆನ್ನುಮೂಳೆ ಸಮಸ್ಯೆ ಮತ್ತು ಚಿಕಿತ್ಸೆ ಕುರಿತು ಅಗತ್ಯ ಮಾಹಿತಿಯ ಕೊರತೆ ಇದ್ದೇ ಇದೆ. ಈ ನಿಟ್ಟಿನಲ್ಲಿ ನಾನು ಸ್ವತಃ ಸಮೂಹ ಮಾಧ್ಯಮಗಳಾದ ದೆಹಲಿ ದೂರದರ್ಶನ ಮತ್ತು ಆಕಾಶವಾಣಿ, ಹಾಗೂ ಚಂದನ ವಾಹಿನಿಗಳ ಮೂಲಕ ಸಂದರ್ಶನವನ್ನು ನೀಡಿ ಈ ಬಗ್ಗೆ ತಿಳುವಳಿಕೆ ನೀಡುತ್ತಿದ್ದೇನೆ. ಈ ಸಂದರ್ಶನವನ್ನು ಗೂಗಲ್ (htttps://youtube.be/mvL6TaiZdxw) ನಲ್ಲಿಯೂ ವೀಕ್ಷಿಸಬಹುದು.

ಇದರ ಜೊತೆಗೆ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿದ್ದೇನೆ. ಇವೆಲ್ಲಕ್ಕಿಂತ ಹೆಚ್ಚಾಗಿ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಂಡು ಜನ ಸಾಮಾನ್ಯರಿಗೆ ಉಚಿತವಾಗಿ ಬೆನ್ನುಮೂಳೆ ಸಮಸ್ಯೆ ಮತ್ತು ಚಿಕಿತ್ಸೆ ಕುರಿತು ಮಾಹಿತಿಯನ್ನು ನೀಡುತ್ತಿದ್ದೇನೆ. ದೆಹಲಿ ಮತ್ತು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಇಂತಹ ಆರೋಗ್ಯ ಶಿಬಿರಗಳನ್ನು ಲಯನ್ಸ್ ಕ್ಲಬ್, ರೋಟರಿ ಕ್ಲಬ್ ಮತ್ತಿತರ ಸಂಘಟನೆಗಳು, ಶಿಕ್ಷಣ ಸಂಸ್ಥೆಗಳು, ವೃದ್ಧಾಶ್ರಮಗಳಲ್ಲಿ ನಡೆಸಿದ್ದೇನೆ. ದೆಹಲಿ ಕರ್ನಾಟಕ ಸಂಘದಲ್ಲೂ ಆರೋಗ್ಯ ಶಿಬಿರವೊಂದನ್ನು ಈಗಾಗಲೇ ಒಮ್ಮೆ ನಡೆಸಿದ್ದೇನೆ, ಮುಂದಿನ ದಿನಗಳಲ್ಲಿಯೂ ಇದನ್ನು ಮುಂದುವರಿಸುವ ಪ್ರಯತ್ನ ಮಾಡುತ್ತೇನೆ. ಅಭಿಮತಕ್ಕಾಗಿ ನಿಮ್ಮೊಂದಿಗೆ ನೀಡುತ್ತಿರುವ ಈ ಒಂದು ಸಂದರ್ಶನ ಕೂಡಾ ಈ ಸಮಸ್ಯೆಯ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಒಂದು ಪುಟ್ಟ ಹೆಜ್ಜೆಯಾಗಿದೆ.

**ಅಭಿಮತ :** ಬೆನ್ನು ನೋವು ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರನ್ನು, ಅದರಲ್ಲೂ ಹೆರಿಗೆ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆಯರಲ್ಲಿ (ಸಿಸೇರಿಯನ್) ವಿಶೇಷವಾಗಿ ಕಾಡುತ್ತಿರುವ ಸಮಸ್ಯೆಗಳಲ್ಲಿ ಒಂದಾಗಿದೆ. ಇದಕ್ಕೆ ಏನೇನು ಮಾರ್ಗೋಪಾಯಗಳನ್ನು ಅವರು ಅನುಸರಿಸಬೇಕು ಎಂಬುದರ ಬಗ್ಗೆ ನಿಮ್ಮ ಸಲಹೆ ಏನು

**ಡಾ. ಗುರುರಾಜ್ ಸಂಗೊಂದಿಮಠ :** ಮಹಿಳೆಯರಿಗೆ ಹೆರಿಗೆ ಸಂದರ್ಭದಲ್ಲಿ ಸಿಸೇರಿಯನ್ ಆದುದರಿಂದಾಗಿ ಬೆನ್ನು ನೋವು ಬರುತ್ತದೆ ಎನ್ನುವದೇ ಒಂದು ತಪ್ಪು ಕಲ್ಪನೆ. ಏಕೆಂದರೆ ಗರ್ಭಿಣಿಯಿದ್ದಾಗ ಅವರ ಸ್ನಾಯುಗಳು, ಮೂಳೆಗಳು ಮತ್ತು ಹಾರ್ಮೋನುಗಳ ವ್ಯತ್ಯಾಸದಿಂದಾಗಿ ಸಹಜವಾಗಿಯೇ ದುರ್ಬಲಗೊಂಡಿರುತ್ತವೆ. ಹೆರಿಗೆಯ ನಂತರ ಅವರು ಸೂಕ್ತ ವ್ಯಾಯಾಮಗಳನ್ನು ಮಾಡದಿದ್ದರೆ ಬೆನ್ನು ಮೂಳೆ ಸಮಸ್ಯೆಗಳು ಎದುರಾಗುತ್ತವೆ. ಅದಕ್ಕಾಗಿ ಎಲ್ಲ ಗರ್ಭಿಣಿಯರು ಹೆರಿಗೆಯ ನಂತರ ಸೂಕ್ತ ಸಲಹೆಯನ್ನು ಪಡೆದು ವ್ಯಾಯಾಮಗಳನ್ನು



ನಿರಂತರವಾಗಿ ಮಾಡಿದರೆ ಬೆನ್ನು ನೋವಿನ ಸಮಸ್ಯೆ ಎದುರಾಗಲಾರದು.

**ಅಭಿಮತ:** ಈ ಬೆನ್ನೆಲುಬು ಮತ್ತು ಬೆನ್ನುಮೂಳೆಗೆ ಸಂಬಂಧಿಸಿದಂತೆ ತೀವ್ರವವಾಗಿ ವೈದ್ಯಲೋಕವನ್ನು ಕಾಡುತ್ತಿರುವ ಸಮಸ್ಯೆ ಯಾವುದು?

**ಡಾ. ಗುರುರಾಜ್ ಸಂಗೊಂದಿಮಠ :** ಅಪಘಾತ ಕ್ರೀಡಾದಾಗ ಸಾಮಾನ್ಯವಾಗಿ ಬೆನ್ನುಹುರಿಗೆ ಆಗುವ ಹಾನಿ ಇಡೀ ಜೀವನಪೂರ್ತಿ ಪಾರ್ಶ್ವವಾಯು (paralysis) ಪೀಡಿತರನ್ನಾಗಿಸುತ್ತದೆ. ಜಗತ್ತಿನಾದ್ಯಂತ ಈ ಸಮಸ್ಯೆ ಕುರಿತು ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆಯಾದರೂ ಇದುವರೆವಿಗೂ ಸೂಕ್ತ ಚಿಕಿತ್ಸೆಯನ್ನು ಕಂಡುಹಿಡಿಯಲಾಗಿಲ್ಲ. ಭಾರತದಲ್ಲಿ ಜನ ಸಾಮಾನ್ಯರಿಗೆ ಮತ್ತು ಬಹಳಷ್ಟು ವೈದ್ಯರಿಗೂ ಕೂಡ ಇದರ ಬಗ್ಗೆ ನಿಖರ ಮಾಹಿತಿ ಇಲ್ಲ. ಖಾಸಗೀ ವಲಯದಲ್ಲಾಗಲೀ, ಸಾರ್ವಜನಿಕ ವಲಯದಲ್ಲಾಗಲೀ ಈ ಬಗೆಗೆ ಅರಿವು ಮೂಡಿಸುವ ಕೆಲಸ ಅಷ್ಟೊಂದು ಆಶಾದಾಯಕವಾಗಿ ನಡೆದಿಲ್ಲ. ಈ ನಿಟ್ಟಿನಲ್ಲಿ ನಾವು ನಮ್ಮ ಇಂಡಿಯನ್ ಸ್ಪೈನಲ್ ಇನ್‌ಜುರೀಸ್ ಸೆಂಟರ್ ಮತ್ತು ಇಂಟರ್‌ನ್ಯಾಷನಲ್ ಸ್ಪೈನಲ್ ಕಾರ್ಡ್ ಸೊಸೈಟಿ ಎರಡೂ ಸೇರಿ ವಿಶ್ವ ಆರೋಗ್ಯ ಸಂಸ್ಥೆಯ ಮೇಲೆ ಒತ್ತಡ ಹೇರಿ ಸೆಪ್ಟೆಂಬರ್ 5ನೇ ತಾರೀಖನ್ನು ಇಂಟರ್ ನ್ಯಾಷನಲ್ ಸ್ಪೈನಲ್ ಕಾರ್ಡ್ ಇಂಜುರೀಸ್ ಡೇ ಎಂದು ಘೋಷಿಸುವಂತೆ ಮಾಡುವಲ್ಲಿ ಯಶಸ್ಸು ಕಂಡಿದ್ದೇವೆ. ಪ್ರತೀ ವರ್ಷ ಈ ದಿನ ದೆಹಲಿಯ ರಾಜಪಥ್‌ನಲ್ಲಿ ಗಾಲಿ ಕುರ್ಚಿ ಪೆರೇಡ್‌ನ್ನು ನಡೆಸಲಾಗುತ್ತದೆ. ಈ ಮೂಲಕ ಜನರಲ್ಲಿ ಬೆನ್ನು ಹುರಿ ಸಮಸ್ಯೆಯಿಂದ ಬಳಲಿ ಪಾರ್ಶ್ವವಾಯು ಪೀಡಿತರಾಗಿರುವವರಿಗೆ ತೋರಬೇಕಾದ ಕಾಳಜಿ ಮತ್ತು ಚಿಕಿತ್ಸೆ ಬಗೆಗೆ ಅರಿವು ಮೂಡಿಸುವ ಕೆಲಸ ಕಳೆದ ಎರಡು ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಉದಾಹರಣೆಗೆ ದೆಹಲಿಯ ವಸಂತ್ ಕುಂಜ್‌ನಲ್ಲಿರುವ ಇಂಡಿಯನ್ ಸ್ಪೈನಲ್ ಇಂಜುರೀಸ್ ಸೆಂಟರ್‌ನ ಅಧ್ಯಕ್ಷರಾದ ಮೇಜರ್ ಹೆಚ್.ಪಿ.ಎಸ್. ಅಹುವಾಲಿಯಾ ಅವರು ಭಾರತ ಚೀನಾ ಯುದ್ಧದ ಸಂದರ್ಭದಲ್ಲಿ ಅವರ ಕುತ್ತಿಗೆಗೆ ಗುಂಡು ತಗಲಿ ಪಾರ್ಶ್ವವಾಯು ಪೀಡಿತರಾಗಿದ್ದರು. ಇವರೇ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಬೆನ್ನು ಹುರಿ ಚಿಕಿತ್ಸೆಗೆ ಸಂಬಂಧಿಸಿದಂತೆ ವಿಶೇಷ ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ಪಣತೊಟ್ಟು ಈ ಸಂಸ್ಥೆಯನ್ನು ಸ್ಥಾಪಿಸಿದರು. ತಾವು ಸ್ವತಹ ಗಾಲಿ ಕುರ್ಚಿಯಲ್ಲಿ ಕುಳಿತು ಇಷ್ಟು ದೊಡ್ಡ ಆಸ್ಪತ್ರೆಯ ದೈನಂದಿನ ಕಾರ್ಯಭಾರಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಇದಕ್ಕೆ ಕಾರಣ ಅವರು ಲಂಡನ್‌ನಲ್ಲಿ ಪಾರ್ಶ್ವವಾಯು ಪೀಡಿತ ಸಮಸ್ಯೆಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡದ್ದು. ಇದಾದ ನಂತರ ಇವರು ಭಾರತ ಸರಕಾರದಿಂದ ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ. ಇವರ ಜೀವನವೇ ಬೆನ್ನುಹುರಿ ಮತ್ತು ಪಾರ್ಶ್ವವಾಯು ಪೀಡಿತ ಜನಸಾಮಾನ್ಯರಿಗೆ ಒಂದು ಸ್ಫೂರ್ತಿದಾಯಕ ಸಂಗತಿ ಎಂದು ಹೇಳಲಿಕ್ಕೆ ಸಂತೋಷ ಎನಿಸುತ್ತದೆ.

**ಅಭಿಮತ :** ಮಕ್ಕಳಲ್ಲಿ ಬೆನ್ನುಮೂಳೆಯ ಸ್ನಾಯುವಿನ ಕ್ಷೀಣತೆ (SMA) ಎನ್ನುವುದು ಅನುವಂಶಿಕ ಕಾಯಿಲೆಯಾಗಿದ್ದು ಇದು ಇತ್ತೀಚೆಗೆ ಅಧಿಕವಾಗಿದೆ ಎಂಬ ವರದಿಗಳಿವೆ. (Spinal Muscular Atrophy (SMA) disease among children) ಇದರ ಚಿಕಿತ್ಸಾ ವಿಧಾನಗಳು ಇನ್ನೂ ಪ್ರಾಯೋಗಿಕ / ಪ್ರಯೋಗ ಹಂತದಲ್ಲಿವೆ ಎಂಬುದಾಗಿ ವರದಿಗಳಿವೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು? ಮತ್ತು ಏನೇನು ಸಂಶೋಧನೆಗಳು ಈಗ ನಡೆಯುತ್ತಿವೆ.

**ಡಾ. ಗುರುರಾಜ್ ಸಂಗೊಂದಿಮಠ :** ಮಕ್ಕಳಲ್ಲಿ ಬೆನ್ನುಮೂಳೆಯ ಸ್ನಾಯುವಿನ ಕ್ಷೀಣತೆ (SMA) ಎನ್ನುವುದು ಅನುವಂಶಿಕ ಕಾಯಿಲೆಯಾಗಿದೆ. ಈ ರೋಗ ಜೀನ್ಸ್‌ನಲ್ಲಿ ಕ್ರೊಮೋಸೋಂಗಳ ವೈಪರೀತ್ಯ ಉಂಟಾದಾಗ ಈ ರೋಗ ಎದುರಾಗುತ್ತದೆ. ವಿವಿಧ ವಯೋಮಾನದಲ್ಲಿ ಇದು ಕಾಣಿಸಿಕೊಳ್ಳಬಹುದು. ಇದರಿಂದಾಗಿ ಶರೀರದ ಎಲ್ಲ ಸ್ನಾಯುಗಳು ಕ್ಷೀಣಿಸುತ್ತವೆ. ಇದರಿಂದ ಆಹಾರ ಸೇವನೆ ಹಾಗೂ ಉಸಿರಾಟಕ್ಕೂ ಕೂಡಾ ತೊಂದರೆಯಾಗುತ್ತದೆ. ಇಂತಹ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳು ಸಾಮಾನ್ಯವಾಗಿ 25 ವರ್ಷ ವಯೋಮಾನದೊಳಗೆ ಸಾವಿಗೀಡಾಗುವ ಸಂಭವವಿರುತ್ತದೆ. ಈ ಬಗ್ಗೆ ಸಾಕಷ್ಟು ಸಂಶೋಧನೆ ನಡೆಯುತ್ತಿದೆಯಾದರೂ ಇನ್ನೂ ಯಶಸ್ವೀ ಚಿಕಿತ್ಸೆಯನ್ನು ಕಂಡುಹಿಡಿಯಲಾಗಿಲ್ಲ.

**ಅಭಿಮತ :** ಭಾರತದಲ್ಲಿ ಬೆನ್ನುಮೂಳೆ ಚಿಕಿತ್ಸೆಗೆ ಅಗತ್ಯವಾದ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೇ? ಹಾಗಿದ್ದರೆ ಅತ್ಯಂತ ಸುಸಜ್ಜಿತ ಹಾಗೂ ಪ್ರಸಿದ್ಧಿಯಲ್ಲಿರುವ ಬೆನ್ನು ಮೂಳೆ ಚಿಕಿತ್ಸಾ ಕೇಂದ್ರ ಯಾವುದು? ಹಾಗಿದ್ದರೆ ಅತ್ಯಂತ ಸುಸಜ್ಜಿತ ಹಾಗೂ ಪ್ರಸಿದ್ಧಿಯಲ್ಲಿರುವ ಬೆನ್ನುಮೂಳೆ ಚಿಕಿತ್ಸಾ ಕೇಂದ್ರ ಯಾವುದು?

**ಡಾ. ಗುರುರಾಜ್ ಸಂಗೊಂದಿಮಠ :** ಭಾರತದಲ್ಲಿ ಬೆನ್ನುಹುರಿ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆಗೆ ಅನುಗುಣವಾಗಿ ಚಿಕಿತ್ಸಾ ಕೇಂದ್ರಗಳು ಖಾಸಗೀ ವಲಯದಲ್ಲಾಗಲೀ ಅಥವಾ ಸರ್ಕಾರೀ ವಲಯದಲ್ಲಾಗಲೀ ಸ್ಥಾಪನೆಗೊಂಡಿಲ್ಲ. ಕಳೆದ ಮೂರು ವರ್ಷಗಳವರೆಗೂ ಇಂಡಿಯನ್ ಸ್ಪೈನಲ್ ಇಂಜುರೀಸ್ ಸೆಂಟರ್ ಭಾರತದ ಏಕೈಕ ಚಿಕಿತ್ಸಾ ಕೇಂದ್ರವಾಗಿತ್ತು. ಇತ್ತೀಚೆಗೆ ಭಾರತ ಸರ್ಕಾರ ದೇಶದಾದ್ಯಂತ ಸುಮಾರು 12 ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದ್ದು ಈ ಕಾರ್ಯ ಪ್ರಗತಿಯ ಹಂತದಲ್ಲಿದೆ.

**ಅಭಿಮತ :** ಇವತ್ತಿನ ಆಧುನಿಕ ಬದುಕು ಅತ್ಯಂತ ವೇಗದ ಬದುಕು ಜನರಿಗೆ ತಮ್ಮ ಆರೋಗ್ಯದ ಬಗ್ಗೆ ಗಮನ ಕೊಡಲಾಗದಷ್ಟು ಅನ್ಯ ಚಟುವಟಿಕೆಗಳು ಆವರಿಸಿಕೊಂಡಿರುತ್ತವೆ. ಇಂತಹ ಸನ್ನಿವೇಶದಲ್ಲಿ ತಮ್ಮ ಕಿವಿಮಾತು ಏನು?

**ಡಾ. ಗುರುರಾಜ್ ಸಂಗೊಂದಿಮಠ :** ಇತ್ತೀಚಿನ ಒತ್ತಡದ ಬದುಕಿನಲ್ಲಿ ವ್ಯಾಯಾಮದ ಕಡೆಗೆ ಜನರ ಗಮನ ಕಡಿಮೆಯಾಗುತ್ತಿದ್ದು ಇದು ಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಶೇಕಡಾ 80 ರಷ್ಟು ಜನ ಒಂದಲ್ಲ ಒಂದು ರೀತಿಯ ಬೆನ್ನು ಮೂಳೆಗೆ ಸಂಬಂಧಿಸಿದ ನೋವುಗಳಿಂದ ಬಳಲುತ್ತಿರುವುದು ಕಂಡುಬರುತ್ತಿದೆ. ಅತೀ ಹೆಚ್ಚಿನ ಮೊಬೈಲ್ ಬಳಕೆ ಮತ್ತು ಟಿ.ವಿ. ವೀಕ್ಷಣೆಯಿಂದ ಈ ಸಮಸ್ಯೆ ಮತ್ತಷ್ಟು ಉಲ್ಬಣಿಸುತ್ತಿದೆ. ಪ್ರತಿಯೊಬ್ಬರು ನಿಯಮಿತ ವ್ಯಾಯಾಮ ಮತ್ತು ಕಾಲ್ನಡಿಗೆ ಮಾಡುವುದರಿಂದ ಬಹುತೇಕ ಈ ಸಮಸ್ಯೆಯನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಸೂಕ್ತವಾದ ಭಂಗಿಯಲ್ಲಿ ಕುಳಿತುಕೊಳ್ಳುವುದು, ಭಾರವಾದ ವಸ್ತುಗಳನ್ನು ಎತ್ತುವಾಗ ಜಾಗ್ರತೆವಹಿಸುವುದು ಬಹಳ ಮುಖ್ಯ. ಅ

**ಅಭಿನಂದನೆ**

# ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಚಿವಾಲಯದ ಜಂಟಿ ಕಾರ್ಯದರ್ಶಿಯಾಗಿ ಕನ್ನಡಿಗ ಗಿರೀಶ್ ಹೊಸೂರ್ ನೇಮಕ



ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿ 1996ನೇ ಬ್ಯಾಚಿನ ಐ.ಎಫ್.ಎಸ್. ಅಧಿಕಾರಿ ಗಿರೀಶ್ ಹೊಸೂರ್ ಅವರು ನೇಮಕವಾಗಿದ್ದಾರೆ. ಗಿರೀಶ್ ಅವರು 1996ರಲ್ಲಿ ಐ.ಎಫ್.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಿಮಾಚಲ ಪ್ರದೇಶದ ಕೇಡರ್‌ಗೆ ಆಯ್ಕೆಯಾದರು. 2004 ರಿಂದ 2012ರವರೆಗೆ ಕರ್ನಾಟಕದ ರಾಜ್ಯದ ಬಾಗಲಕೋಟೆ, ಬೆಳಗಾವಿ ಹಾಗು ದಾವಣಗೆರೆ ಜಿಲೆಲಯಲ್ಲಿ ಅರಣ್ಯ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಸುಪ್ರಸಿದ್ಧವಾದ ಚಂಬ ಹಾಗೂ ಧರ್ಮಶಾಲಾ ಜಿಲ್ಲೆಯಲ್ಲಿ ಉಪಅರಣ್ಯ ಸಂರಕ್ಷಣಾಧಿಕಾರಿಯಾಗಿ ತಮ್ಮ ಸೇವೆಯ ಆರಂಭದ ದಿನಗಳಲ್ಲೇ ಸೇವೆ ಸಲ್ಲಿಸಿದ್ದಾರೆ. ನಂತರ ಹಿಮಾಚಲ ಪ್ರದೇಶದ ಅರಣ್ಯ ನಿಗಮದ ನಿರ್ದೇಶಕರಾಗಿ, ಕುಲು ಮನಾಲಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಕಳೆದ ಎರಡು ವರ್ಷಗಳ ಅವಧಿಯವರೆಗೆ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದಲ್ಲಿ ಪ್ರಾಥಮಿಕ ಶಿಕ್ಷಣ ವಿಭಾಗದಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಅ

***ಅಭಿಮತ ವರದಿ***

# ನೀರು ಮತ್ತು ಮಹಿಳೆಯ ಚಿತ್ರಗಳು

ಶ್ರೀ ಬಾಲಕೃಷ್ಣ ನಾಯ್ಕ್ ಅವರು ದೆಹಲಿ ಕನ್ನಡಿಗರ ನಡುವೆ ಕವಿಯಾಗಿ, ನಾಟಕ ನಿರ್ದೇಶಕನಾಗಿ ಎಲ್ಲರಿಗೂ ಚಿರಪರಿಚಿತರು. ಸದಾ ಜನಪರ ನಿಲುವಿನಿಂದ ಮಾತಾಡುವ ಮತ್ತು ಬರೆಯುವ ಅವರು ಇದೀಗ ತಮ್ಮ ಇನ್ನೊಂದು ಹವ್ಯಾಸವಾದ ಛಾಯಾಚಿತ್ರ ಗ್ರಹಣ ಪ್ರತಿಭೆಯ ಕೆಲವು ಮುಖಗಳನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಿದ್ದಾರೆ. ವಾಟರ್ ಎನ್‌ಕೌಂಟರ್ ಹೆಸರಿನಲ್ಲಿ ಅವರ ಛಾಯಾಚಿತ್ರಗಳು ಏಪ್ರಿಲ್ 21ರಿಂದ 30ರವರೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶಿತಗೊಂಡವು. ಈ ಪ್ರದರ್ಶನದಲ್ಲಿ ಕಾಣಿಸಿಕೊಂಡ ಎಲ್ಲಾ ಚಿತ್ರಗಳ ಕೇಂದ್ರದಲ್ಲಿ ನೀರು ಮತ್ತು ಮಹಿಳೆ ಇದ್ದದ್ದು ವಿಶೇಷವೇ ಸರಿ. ಈ ಎರಡೂ ಪ್ರತಿಮೆಗಳನ್ನು ನೀರಿಲ್ಲದ ಒಡೆದ ನೆಲದ ಚೌಕಟ್ಟಿನಲ್ಲಿ ಬಂಧಿಸಿದ್ದರಿಂದ ಅದಕ್ಕೆ ಬರಗಾಲದ ಲೇಪವೂ ಪ್ರಾಪ್ತಿಸಿತು . ಬರಗಾಲದ ಭೂಮಿ ರಾಜಸ್ಥಾನ ಮತ್ತು ಗುಜರಾತಿಗೆ ಸೇರಿದೆ. ಈ ಅಂಶವು ಛಾಯಾಚಿತ್ರಗಳನ್ನು ಅವುಗಳು ಬಾಹ್ಯ ಸೌಂದರ್ಯದಿಂದಾಚೆ ನಮ್ಮನ್ನು ಕೊಂಡೊಯ್ದು ಮಹಿಳೆ, ನೀರು ಮತ್ತು ಬರಗಾಲದ ಬಗ್ಗೆ ಯೋಚಿಸುವಂತೆ ಮಾಡಿದೆ.

ನಮ್ಮ ಪಾರಂಪರಿಕ ಚಿಂತನಾಕ್ರಮದಲ್ಲಿ ನಾವು ಮಹಿಳೆಯನ್ನು ಪ್ರಕೃತಿಯ ಜೊತೆ ಸಮೀಕರಿಸುತ್ತಲೇ ಬಂದಿರುವುದು ನಿಜ. ಭೂಮಿಯನ್ನು ತಾಯಿ ಅನ್ನುತ್ತೇವೆ. ಪ್ರಕೃತಿಯ ಅನೇಕ ಅಂಶಗಳನ್ನು ಹೆಣ್ಣಿಗೆ ಅನ್ವಯಿಸಿ ಮಾತಾಡುತ್ತೇವೆ. ಗಂಗಾ, ಯಮುನಾ, ಅಂಬುಜಾ, ಗಿರಿಜಾ, ಸರಿತಾ, ನಾಗವೇಣಿ ಮೊದಲಾದುವು ಇಂದಿಗೂ ಜನಪ್ರಿಯ ಹೆಸರುಗಳೇ. ಆದರೆ ಪ್ರಾಯೋಗಿಕವಾಗಿ ನಾವು ಗಂಗೆಯ ತುಂಬಾ ಕೊಳೆ ತುಂಬಿದ್ದೇವೆ, ಯಮುನಾ ಗಬ್ಬುನಾತದಿಂದ ಸೊರಗಿದೆ. ಅಂಬುಜಗಳು ಕಾಣೆಯಾಗಿದ್ದಾವೆ, ಗಿರಿಗಳನ್ನು ಸೂರೆ ಮಾಡಿದ್ದೇವೆ, ನೀರು ಮಲಿನವಾಗಿದೆ, ನಾಗಗಳು ನಾಶವಾಗಿವೆ. ಅಂದರೆ ಮಹಿಳೆ ಮತ್ತು ಪ್ರಕೃತಿಯನ್ನು ಜೊತೆ ಸೇರಿಸಿಕೊಂಡೇ ಅವೆರಡನ್ನೂ ನಾವು ನಿರಂತರವಾಗಿ ನಾಶ ಮಾಡುತ್ತಲೇ ಬಂದಿದ್ದೇವೆ.

ಒಂದರ್ಥದಲ್ಲಿ ಮಹಿಳೆ ಮತ್ತು ಪ್ರಕೃತಿಯ ಸಮೀಕರಣ ಅರ್ಥಪೂರ್ಣವಾಗಿದೆ. ಯಾಕೆಂದರೆ, ಇಂದು ಮನೆ ಪಕ್ಕದ ಬಾವಿಯಲ್ಲಿ ನೀರು ಬತ್ತಿದರೆ, ಅದರ ತಕ್ಷಣದ ಪರಿಣಾಮವಾಗುವುದು ಮಹಿಳೆಯ ಮೇಲೆಯೇ. ಮಕ್ಕಳಿಗೆ ನೀರು ಕುಡಿಸುವ, ಮನೆ ಮಂದಿಗೆಲ್ಲಾ ಅಡುಗೆ ಮಾಡಿ ಬಡಿಸುವ, ನೆಂಟರು ಬಂದರೆ ಅವರಿಗೆ ಸ್ನಾನ ಮಾಡಲು ನೀರು ಕಾಯಿಸುವ ಜವಾಬ್ದಾರಿ ಅವಳದ್ದೇ ಆದುದರಿಂದ ನೀರು ತರುವ ಕೆಲಸವನ್ನು ಅವಳೇ ಹೊತ್ತುಕೊಳ್ಳುತ್ತಾಳೆ. ಅದಕ್ಕಾಗಿ ಆಕೆ ಒಂದೋ ನೀರು ಹುಡುಕುತ್ತಾ ದೂರ ದೂರ ಸಾಗುತ್ತಾಳೆ ಇಲ್ಲವೇ ಕೊಳವೆ ಬಾವಿಯ ಹತ್ತಿರ ಬಾರದಿರುವ ನೀರಿಗೆ ಕಾಯುತ್ತಾ ಕುಳಿತುಕೊಳ್ಳುತ್ತಾಳೆ. ಬಾಲಕೃಷ್ಣ ನಾಯ್ಕರ ಎಲ್ಲ ಚಿತ್ರಗಳಲ್ಲಿಯೂ ಮಹಿಳೆಯೇ ಕಾಣಿಸಿಕೊಳ್ಳುತ್ತಿರುವುದನ್ನು ತುಂಬು ಎಚ್ಚರದಿಂದ ಗಮನಿಸಬೇಕು. ಅದು ಆಕಸ್ಮಿಕವೇನೂ ಅಲ್ಲ. ಮನೆ ಪಕ್ಕದ ಕಾಡು ನಾಶವಾದರೆ ಸೌದೆ ತರಲು ದೂರ ದೂರ ನಡೆದು ಹೋಗುವ ಕೆಲಸವೂ ಅವಳದೇ. ದನಗಳ ಹಟ್ಟಿಗೆ ಸೊಪ್ಪು ತರಲು ನಡೆದು ಹೋಗುವ ಮಹಿಳೆಯರ ಬವಣೆಯನ್ನು ಕಂಡೇ ಅರ್ಥಮಾಡಿಕೊಳ್ಳಬೇಕು. ನೀರು ಮಲಿನಗೊಂಡರೆ ಗರ್ಭಿಣಿಯರು ಅದರ ತಕ್ಷಣದ ಬಲಿಪಶುಗಳು. ವಾಯು ಮಾಲಿನ್ಯದ ಅಪಾಯ ಮೊದಲು ಕಾಣಿಸಿಕೊಳ್ಳುವುದು ಮಕ್ಕಳಲ್ಲಿ. ಪ್ರಕೃತಿಯನ್ನು ಕೊಳ್ಳೆಹೊಡೆಯುವುದರ ಪೂರ್ಣ ಲಾಭ ಗಂಡಸರಿಗಾದರೆ ಅದರ ತೊಂದರೆಗಳೆಲ್ಲ ಮಹಿಳೆಯರ ಮೇಲೆಯೇ ಆಗುತ್ತದೆ. ನೀರು ಕೊಡುವುದು ತಡವಾದರೆ, ಹಟ್ಟಿಗೆ ಸೊಪ್ಪು ತಾರದೇ ಹೋದರೆ, ಮಕ್ಕಳಿಗೆ ಊಟ ಕೊಡದೇ ಹೋದರೆ ಗಂಡನ ಆಕ್ರಮಣಕ್ಕೆ ಒಳಗಾಗುವವಳು ಕೂಡಾ ಮಹಿಳೆಯೇ ಆಗಿದ್ದಾಳೆ. ಪ್ರಕೃತಿಯ ವಿನಾಶದ ಜೊತೆಗೆ ಮಹಿಳೆಯೂ ವಿನಾಶಗೊಳ್ಳುತ್ತಿರುವುದನ್ನು ಜಗತ್ತು ಇದೀಗ ಹೊಸದಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಇಂಥ ಭಯಾನಕ ಸ್ಥಿತಿಯಿಂದ ಮಹಿಳೆಯನ್ನು ಮತ್ತು ಪರಿಸರವನ್ನು



ಪಾರುಮಾಡಲು ಕರೆಕೊಟ್ಟಂತಿದೆ ಬಾಲಕೃಷ್ಣರ ಛಾಯಾಚಿತ್ರಗಳು.

ಮಹಿಳೆ ಮತ್ತು ನೀರನ್ನು ಒಟ್ಟಾಗಿಯೇ ರಕ್ಷಿಸಬೇಕೆಂಬ ಕೂಗು ಮೊದಲ ಬಾರಿಗೆ ಪರಿಣಾಮಕಾರಿಯಾಗಿ ಕೇಳಿಸಿದ್ದು 70ರ ದಶಕದಲ್ಲಿ. 1974ರಲ್ಲಿ ಫ್ರಾನ್ಸಿನ ಲೇಖಕಿ ಫ್ರಾಂಕೋಯಿಸ್ ಡಿ'ಯುಬೊನ್ನೆಯು ಮೊದಲ ಬಾರಿಗೆ ನೀರು ಮತ್ತು ಮಹಿಳೆಯರ ವಿನಾಶದ ಬಗ್ಗೆ ಪರಿಣಾಮಕಾರಿಯಾಗಿ ಬರೆದಳು. ಮುಂದೆ ಗ್ರೇಟಾ ಗಾರ್ಡ್ ಮತ್ತು ಲೋರಿ ಗ್ರುಯೆನ್ ಅವರು ಸಮಕಾಲೀನ ಜಗತ್ತಿನ ನಾಲ್ಕು ಪ್ರಮುಖ ಬೆಳವಣಿಗೆಗಳಾದ ಭೂಮಿಯ ಲೂಟಿ, ಪಿತೃ ಪ್ರಧಾನ ಚಿಂತನಾಧರಿತ ಧಾರ್ಮಿಕ ಚಳುವಳಿಗಳು, ಬಂಡವಾಳಶಾಹೀ ಆರ್ಥಿಕ ವ್ಯವಸ್ಥೆಯ ಶೋಷಣೆಯ ಹೊಸ ಕ್ರಮಗಳು ಹಾಗೂ ಆಧುನಿಕ ಮಾನವನ ದುರಹಂಕಾರ –ಇವು ಪರಿಸರ ಮತ್ತು ಮಹಿಳೆಯನ್ನು ಹೇಗೆ ಒಟ್ಟಾಗಿಯೇ ವಿನಾಶದತ್ತ ತಳ್ಳಿದವು ಎಂದು ವಿವರಿಸಿದರು. ಡಾ. ವಂದನಾ ಶಿವ ಅವರು ದೈನಂದಿನ ಬದುಕಿನಲ್ಲಿ ಮಹಿಳೆಯು ಹೇಗೆ ನೀರಿನೊಂದಿಗೆ ಗಾಢ ಸಂಬಂಧ ಹೊಂದಿದ್ದಾಳೆ ಎಂದು ವಿವರಿಸಿದ್ದಾರೆ. ಮುಂದೆ ಜೆನೆಟ್ ಬೆಹೆಲ್, ರೋಸ್ ಮೆರಿ ರೂಥರ್, ಗ್ರಿಫಿಟ್, ಕರೋಲಿನ್ ಮರ್ಚೆಂಟ್, ಮರಿಯಾ ಮೀಸ್ ಮೊದಲಾದವರು ಮಹಿಳೆ ಮತ್ತು ನೀರಿನ ನಡುವಣ ಸಂಬಂಧಗಳನ್ನು ಜಾಗತಿಕ ತಿಳುವಳಿಕೆಗಳ ಚೌಕಟ್ಟಿನಲ್ಲಿ ಬರೆದರು. ಇವರೆಲ್ಲರೂ ಇಲ್ಲವಾಗುತ್ತಿರುವ ನೀರಿನ ಜೊತೆಗೆ ಪತನಮುಖಿಯಾಗುತ್ತಿರುವ ಮಹಿಳೆಯರನ್ನು ಒಟ್ಟಾಗಿ ಗ್ರಹಿಸುವ ಪ್ರಯತ್ನ ಮಾಡಿದರು. ಈ ಅನಾಹುತಗಳಿಗೆ ಕಾರಣವಾಗುತ್ತಿದ್ದ ಪುರುಷರ ಅಹಂಕಾರ ಮತ್ತು ಆಕ್ರಮಣಕಾರೀ ಪ್ರಕ್ರಿಯೆಗಳನ್ನೂ ಈ ಸಂದರ್ಭದಲ್ಲಿ ವಿಶೇಷ ಎಚ್ಚರದಿಂದ ಪರಿಶೀಲಿಸಲಾಯಿತು.

ಬಾಲಕೃಷ್ಣರ ಚಿತ್ರಗಳನ್ನು ನೋಡುತ್ತಿದ್ದಂತೇ ನಾನು ಭಾವುಕನಾಗಲು ಇದು ಕಾರಣ. ನೀರು ಮತ್ತು ಮಹಿಳೆಯರು ಸರ್ವನಾಶದ ಹಾದಿ ಹಿಡಿಯುತ್ತಿರುವ ಕಾಲವಿದು. ಅವರ ಭಾವಚಿತ್ರಗಳು ನೀರು, ನೆಲ ಮತ್ತು ಮಹಿಳೆಯ ಉಳಿಯುವಿಕೆಗೆ ಸಾಮಾಜಿಕ ಆಂದೋಲನವೊಂದನ್ನು ಹುಟ್ಟು ಹಾಕಲು ಕರೆಕೊಡುತ್ತವೆ. ಹೊಸ ಪರಿಭಾಷೆಗಳನ್ನು ಕಂಡುಕೊಳ್ಳಲು ಒತ್ತಾಯಿಸುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯು ಪಶ್ಚಿಮದ ಅಭಿವೃದ್ಧಿ

ಮಾದರಿಗಳನ್ನು ಆಧರಿಸಿ ತನ್ನ ಸ್ವಾರ್ಥಕ್ಕಾಗಿ ಪರಿಸರ ಮತ್ತು ಮಹಿಳೆಯರ ಮೇಲೆ ನಿಯಂತ್ರಣ ಸಾಧಿಸಿ, ಅವನ್ನು ಶೋಷಣೆಗೊಳಪಡಿಸುತ್ತಿದೆ.

ಮಹಿಳೆ ಮತ್ತು ನೀರು ಇಂದು ಒಂದು ದೊಡ್ಡ ಸಂಕಟದಲ್ಲಿರುವುದನ್ನು ಬಾಲಕೃಷ್ಣರು ನಮ್ಮ ಗಮನಕ್ಕೆ ತಂದಿದ್ದಾರೆ.



ಅವುಗಳನ್ನು ಹೊಸ ಬಗೆಯ ಎಚ್ಚರಿಕೆಯಿಂದ ನೋಡುವ ದೃಷ್ಟಿಕೋನವನ್ನು ನಾವೆಲ್ಲ ಬೆಳೆಸಿಕೊಳ್ಳಬೇಕಾಗಿದೆ. ಈ ವಿಷಯದಲ್ಲಿ ಗಂಡಸರ ಮನೋಭೂಮಿಕೆಯಲ್ಲಿ ತೀವ್ರ ಬದಲಾವಣೆ ಅಗತ್ಯ.

ಒಡೆದ ನೆಲದ ಬಿರುಕಿನಲ್ಲಿ ಮರೆಯಾಗುವ ಹೆಜ್ಜೆಗಳಿಗೆ,
ವಿಷಪೂರಿತ ನೀರಿನಲ್ಲಿ ನಿಟ್ಟುಸಿರುಡುವ ಮೀನುಗಳ ರೋಧನಗಳಿಗೆ,
ಕಾಡಿಲ್ಲದೆ ಬರಡಾದ ನೆಲದ ಮೇಲೆ ಹರಿದು ಮರೆಯಾಗುವ
ಮಳೆ ನೀರಿನ ಮೌನಕ್ಕೆ,
ಮಹಿಳೆ ಸದಾ ಮೈಯಾಗುತ್ತಾಳೆ.
ನೀರಿನ ನಾಶ ಹೆಣ್ಣಿನ ನಾಶ.

ಈ ಅರಿವನ್ನು ಹುಟ್ಟಿಸುವಲ್ಲಿ ಬಾಲಕೃಷ್ಣ ನಾಯ್ಕರ ಛಾಯಾಚಿತ್ರಗಳು ಯಶಸ್ವಿಯಾಗಿದ್ದುವು. ಅ

**ಪುರುಷೋತ್ತಮ ಬಿಳಿಮಲೆ**

### ರಮಣೀಯ ಛಾಯಾಚಿತ್ರ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ನಡೆದ ಬಾಲಕೃಷ್ಣ ನಾಯ್ಕ್ ಡಿ ಅವರ "ವಾಟರ್ ಎನ್‌ಕೌಂಟರ್ಸ್" ಛಾಯಾಚಿತ್ರ ಪ್ರದರ್ಶನ ಅದ್ಭುತವಾಗಿ ನೀರಿನ ವಿವಿಧ ಭಂಗಿಗಳನ್ನು ಸೆರೆಹಿಡಿದ ರೀತಿ ನಿಜವಾಗಲು ಪ್ರಶಂಸನೀಯ. ಅವರು ನೀರಿನ ಒಂದೊಂದು ಹನಿ ಎಷ್ಟು ಮಹತ್ವವಾಗಿದೆ, ಹಳ್ಳಿಗಳಲ್ಲಿ ಇಂದಿಗೂ ಜನರು ನೀರಿಗಾಗಿ ಪರದಾಡುವ ರೀತಿ, ನೀರನ್ನು ಸಂಗ್ರಹಿಸುವ ಪಾತ್ರೆಗಳು, ನೀರಿಲ್ಲದೆ ನಮ್ಮ ಭೂಮಿ ಒಣಗಿ ಬಂಜರಾದ ಚಿತ್ರ, ಸಮುದ್ರ ನೀರು ಮತ್ತೇ ನೀರಿನ ವಿವಿಧ ರೂಪಗಳನ್ನು ಛಾಯಾ ಚಿತ್ರದಲ್ಲಿ ತೋರಿಸಿರುವ ಬಗೆ ಅತೀವ ರಮಣೀಯ ಹಾಗು ಅದ್ಭುತವಾಗಿತ್ತು.

**ಡಾ. ಎಸ್. ಎಲ್. ಭಂಡಾರ್‌ಕರ್**



## ಬಹುಮುಖ ಪ್ರತಿಭೆಯ ದೆಹಲಿಯ ಹಿರಿಯ ಕನ್ನಡಿಗ

# ಸುಧಾಕರ ರಾವ್ ಕುರಂದವಾಡ

ಬಹುಮುಖ ಪ್ರತಿಭೆಯ ದೆಹಲಿಯ ಹಿರಿಯ ಕನ್ನಡಿಗ ಸುಧಾಕರ ರಾವ್ ಕುರಂದವಾಡ ಅವರು ದೆಹಲಿಯಲ್ಲಿಯೇ ತಮ್ಮ ನಿವೃತ್ತಿಯ ಜೀವನವನ್ನು ನಡೆಸುತ್ತಿದ್ದಾರೆ. ಅವರೊಬ್ಬ ನಿವೃತ್ತ ಸೈನಿಕ. ಜತೆಗೆ ಅವರು ಸಾಹಿತ್ಯ, ರಂಗಭೂಮಿ ಮತ್ತು ಚಲನಚಿತ್ರರಂಗಗಳಿಗೂ ಕೊಡುಗೆ ನೀಡಿದ್ದಾರೆ.

ಹೊರನಾಡಿನಲ್ಲಿದ್ದು ಅವರು ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಜನಕಪುರಿ ಕನ್ನಡ ಕೂಟ ಮೊದಲಾದ ಕನ್ನಡ ಸಂಘ ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿ ಕನ್ನಡಿಗರನ್ನು ಒಟ್ಟುಗೂಡಿಸಿದ್ದಾರೆ.

ಡಾ. ಸರೋಜಿನಿ ಮಹಿಷಿಯರೊಂದಿಗೆ 1972ರಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಹಳೆಯ ಕಟ್ಟಡದ ಗುದ್ದಲಿ ಪೂಜೆ ಹಾಗೂ 1977ರಲ್ಲಿ ನಡೆದ ಸಂಘದ ಕಟ್ಟಡದ ಉದ್ಘಾಟನೆಯಲ್ಲಿ ಭಾಗವಹಿಸಿದ ಹೆಗ್ಗಳಿಕೆ ಅವರದ್ದು. ಅವರ ಕಾರ್ಯವೈಖರಿ ಹಾಗೂ ಕನ್ನಡದ ಅಭಿಮಾನವನ್ನು ಕಂಡ ಡಾ. ಸರೋಜಿನಿ ಮಹಿಷಿಯವರು ಅವರನ್ನು ಸಂಘದ ಕಾರ್ಯಕಾರಿ ಸಮಿತಿಯಲ್ಲಿ ನಾಮಾಂಕಿತ ಸದಸ್ಯರನ್ನಾಗಿ ನೇಮಿಸಿಕೊಂಡಿದ್ದರು. ನಂತರ ಅವರು 1994–96ರ ಅವಧಿಯಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿ ಕೆಲಸ ನಿರ್ವಹಿಸಿದ್ದಾರೆ.

ಕುರಂದವಾಡವಾಡರು ಎ.ಪಿ.ಎಸ್. ಕನ್ನಡ ಸಂಘ ಕಟ್ಟಿ ಕೆಲಸ ಮಾಡಿದ್ದಾರೆ. ಆ ಸಂಘದ ಮೂಲಕ ಎರಡು ಕನ್ನಡ ನಾಟಕಗಳನ್ನು ಸಹ ನೀಡಿದ್ದಾರೆ. ಜನಕಪುರಿ ಕನ್ನಡ ಕೂಟದಲ್ಲಿ 1997ರಲ್ಲಿ ಸದಸ್ಯರಾಗಿ ನಂತರ ಎರಡು ಬಾರಿ ಕನ್ನಡ ಕೂಟದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಒಂದು ಬಾರಿ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಲ್ಲದೆ, ಅನೇಕ ನಾಟಕಗಳಲ್ಲಿ ನಟಿಸಿ, 'ದೇವರು ಎದ್ದು ಬಂದಾಗ' ನಾಟಕದಲ್ಲಿ ದೆಹಲಿ ಹಾಗೂ ಮುಂಬೈನಲ್ಲಿ ಪ್ರದರ್ಶನ ನೀಡಿದ್ದಾರೆ. ಅಲ್ಲದೆ ಅವರು 'ಜಾತ್ರೆ' ನಾಟಕದಲ್ಲೂ ಸಹ ಅಭಿನಯಿಸಿದ್ದಾರೆ. ಕುರಂದವಾಡರು ಕನ್ನಡ ಚಲನಚಿತ್ರ 'ಸೈನಿಕ'ದಲ್ಲಿ ಸಹಾಯಕ ನಿರ್ದೇಶಕರಾಗಿ ಶ್ರೀ ಸಿ.ಪಿ. ಯೋಗೀಶ್ವರ ರಾವ್ ಅವರೊಂದಿಗೆ ಅತಿಥಿ ಕಲಾವಿದರಾಗಿ ಸಹ ನಟಿಸಿದ್ದಾರೆ.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ 1998–2000ರ ಸಾಲಿನಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದ್ದರು. ಅವರು ತಮ್ಮ ನಾಲ್ಕು ಮಕ್ಕಳನ್ನು ಕೂಡಾ ಕನ್ನಡ ಶಾಲೆಯಲ್ಲಿಯೇ ಓದಿಸಿದ್ದಾರೆ. ಅವರು ಕನ್ನಡ ಶಾಲೆಯ ಪಾಲಕ–ಶಿಕ್ಷಕರ ಸಮಿತಿಯಲ್ಲೂ ಸಹ ಕೆಲಸ ಮಾಡಿ ಅಂದಿನ ಪ್ರಾಂಶುಪಾಲರಿಗೆ ಅನೇಕ ಸಲಹೆಗಳನ್ನು ನೀಡಿದ್ದಾರೆ.

ಕುರಂದವಾಡರಿಗೆ ಕನ್ನಡ ಸಾಹಿತ್ಯದ ಗೀಳು ಬಾಲ್ಯದಿಂದಲೇ ಇತ್ತು. ಅನೇಕ ಕನ್ನಡ ಕವಿ ಹಾಗೂ ಲೇಖಕರ ಕಥೆ, ಕವನ, ಕಾದಂಬರಿಗಳನ್ನು ಓದುತ್ತಲೇ ಬಂದ ಅವರು ತಮ್ಮ ಅಣ್ಣಂದಿರಾದ ವಸಂತ ಮಾಧವ ಹಾಗೂ ಶ್ಯಾಮ ಕುರಂದವಾಡರೊಂದಿಗೆ ಸೇರಿಕೊಂಡು 'ದಿಕ್ಕಿಲ್ಲದ ಶವ' ಎಂಬ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಅದರ ಮುನ್ನುಡಿ ಬರೆದವರು ಕಮಲಾ ನಾಗರಾಜಯ್ಯನವರು. ಕಾಲೇಜಿನಲ್ಲಿರಬೇಕಾದರೆ ಹಲವಾರು ಕವಿತೆಗಳನ್ನು ಬರೆದು 'ಗೃಹಲಕ್ಷ್ಮಿ' ಎಂಬ ಕವನ ಸಂಕಲನ ಪ್ರಕಟಿಸಿದ್ದಾರೆ. ನಂತರ 'ನಾನು–ನೀನು' ಎಂಬ ಕವನ ಸಂಕಲನವು ದೆಹಲಿ ಕರ್ನಾಟಕ ಸಂಘದಿಂದ 2015ರಲ್ಲಿ ಪ್ರಕಟಗೊಂಡಿದೆ. ಅದರ ಮುನ್ನುಡಿ ಬರೆದವರು ಡಾ. ಪುರುಷೋತ್ತಮ ಬಿಳಿಮಲೆಯವರು. ಇಷ್ಟೇ ಅಲ್ಲದೆ ಕನ್ನಡದ ಅನೇಕ ಪತ್ರಿಕೆಗಳಲ್ಲಿ ಕುರಂದವಾಡರ ಕಥೆ, ಕವನಗಳು ಪ್ರಕಟವಾಗಿವೆ.

"ನನ್ನ ಧರ್ಮಪತ್ನಿ ವಸುಂಧರಾ ಅವರೇ ನನ್ನ ಶಕ್ತಿ" ಎನ್ನುವ ಕುರಂದವಾಡರಿಗೆ ದಾಂಪತ್ಯ ಜೀವನದಲ್ಲಿ ಎದುರಾದ ಅನೇಕ ಕಷ್ಟದ ಸಮಯಗಳಲ್ಲಿ ಅವರನ್ನು ಧೈರ್ಯದಿಂದಲೇ ಮುನ್ನಡೆಸಿದವರು ಅವರ ಪತ್ನಿಯೇ ಎನ್ನುತ್ತಾರೆ. ಗಂಡ ಸೈನ್ಯದಲ್ಲಿ ಕೆಲಸ ಮಾಡಿದ ಸಮಯದಲ್ಲಿ ವಸುಂಧರಾ ಅವರು ತಮ್ಮ ಸಣ್ಣಮಕ್ಕಳಿಗೆ ತಾಯಿಯಾಗಿ ಮಾತ್ರವಲ್ಲದೇ ತಂದೆಯಾಗಿಯೂ ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ. ಮಕ್ಕಳನ್ನು ಸಾಕಿ ಸಲಹಿ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಈ ಮಕ್ಕಳ ಯಶಸ್ಸು ವಸುಂಧರಾ ಅವರಿಗೆ ಸೇರಿದ್ದು ಎಂದು ಕುರಂದವಾಡರು ಹೇಳುತ್ತಾರೆ. ಅವರ ದೊಡ್ಡ ಮಗಳು ಸೀಮಾ ಮುಂಬೈಯಲ್ಲಿ ಸೀನಿಯರ್ ಮ್ಯಾನೇಜರ್ ಆಗಿ ಮಲ್ಟಿ ನ್ಯಾಷನಲ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಎರಡನೇ ಮಗಳು ಮಾಧುರಿ ಬೆಂಗಳೂರಿನಲ್ಲಿ ಮಾಸ್ಟರ್ ಆಫ್ ಮ್ಯೂಸಿಕ್ ಪದವಿ ಪಡೆದು ಪ್ರತಿಷ್ಠಿತ ಸಂಗೀತ ಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಮೂರನೇಯವರು ಅರ್ಚನಾ, ಅರ್ಕಿಟೆಕ್ಟ್ ಆಗಿ ದೆಹಲಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ನಾಲ್ಕನೆಯವನು ಸುಪುತ್ರ ಚಿ. ನಾಗರಾಜ್, ಅಟೋಮೊಬೈಲ್ ಇಂಜಿನಿಯರಿಂಗ್ ಓದಿ ಎಂ.ಬಿ.ಎ. ಮುಗಿಸಿ ನಿಸಾನ್ ಮೋಟರ್ಸ್ ಕಂಪನಿಯಲ್ಲಿ ರೀಜಿನಲ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ಎಲ್ಲಾ ಅಳಿಯಂದಿರು ಹಾಗೂ ಸೊಸೆಯು ವಿದ್ಯಾವಂತರಾಗಿದ್ದು ಉತ್ತಮ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ದೆಹಲಿಯ ಹಿರಿಯ ಕನ್ನಡಿಗ ಸುಧಾಕರ ರಾವ್ ಕುರಂದವಾಡ ಅವರು ತಮ್ಮ ಎಪ್ಪತ್ತೈದನೆಯ ಹುಟ್ಟು ಹಬ್ಬ ಮತ್ತು ಐವತ್ತನೆಯ ವಿವಾಹ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದಾರೆ. ಅವರ ಮಕ್ಕಳು, ಮೊಮ್ಮಕ್ಕಳು, ಸ್ನೇಹಿತರು ಹಾಗೂ ಬಂಧುಬಾಂಧವರು ಸೇರಿ ಬೆಂಗಳೂರಿನಲ್ಲಿ ವಿಜೃಂಭಣೆಯಿಂದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಅವರಿಗೆ ದೆಹಲಿಯ ಸ್ನೇಹಿತರ ಮತ್ತು ಒಡನಾಡಿಗಳ ಶುಭ ಹಾರೈಕೆಗಳು. ಅ

*ಡಾ. ಎಸ್.ಎಲ್. ಭಂಡಾರ್‌ಕರ್*



# ದೆಹಲಿಯ ಹಿರಿಯ ಕನ್ನಡತಿ ಸಾವಿತ್ರಿ ಶಾಸ್ತ್ರಿ



ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷರಾದ ದಿವಂಗತ ಗೋಪಾಲ ಶಾಸ್ತ್ರಿಯವರ ಧರ್ಮಪತ್ನಿ ಶ್ರೀಮತಿ ಸಾವಿತ್ರಿ ಶಾಸ್ತ್ರಿ ತಮ್ಮ ತುಂಬು ವಯಸ್ಸಿನಲ್ಲಿ ನವದೆಹಲಿಯ ಸುಜಾನ್ ಸಿಂಗ್ ಪಾರ್ಕ್ ವಾಸ್ತವ್ಯ ಕ್ಷೇತ್ರದಲ್ಲಿದ್ದಾರೆ. ವೃದ್ಧಾಪ್ಯದಲ್ಲಿರುವ ಅವರಿಗೆ ಮರೆವು ಕಾಯಿಲೆಯಿದ್ದು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಶ್ರದ್ಧೆಯ ಆರೈಕೆಯಲ್ಲಿ ಬದುಕುತ್ತಿದ್ದಾರೆ. ಸುದೀರ್ಘ ಕಾಲದ ನಮ್ಮ ಗೆಳೆತನದಿಂದಾಗಿ ನಾನು ತಿಂಗಳಿಗೊಂದು ಬಾರಿಯಾದರೂ ಅವರನ್ನು ನೋಡಲು ಹೋಗುತ್ತೇನೆ.

ಅವರ ಗೆಳೆತನದ ನೆನಪು ನಾವು ಅಂದಿನ ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನಲ್ಲಿ ಅವರನ್ನು ದೆಹಲಿಯ "ಹಿರಿಯ ಕನ್ನಡತಿ" ಎಂದು ಸನ್ಮಾನಿಸುವ ಕಾರ್ಯಕ್ರಮವನ್ನು ನಡೆಸಿದ ಕಡೆಗೆ ಸಾಗುತ್ತದೆ. ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಸುಮಿತ್ರಾ ರಾವ್ ಅವರ ಮನೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರನ್ನು ಪರಿಚಯಿಸಿದ ಗೌರವ ನನಗೆ ದೊರಕಿತ್ತು. ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ಕಲ್ಲೂರು, ಕಾರ್ಯದರ್ಶಿ ಶ್ರೀಮತಿ ಸ್ವರ್ಣಲತಾ ಮೃತ್ಯುಂಜಯ ಆಗಿದ್ದು ನಾನು ಖಜಾಂಚಿಯಾಗಿದ್ದೆ. ಸಾವಿತ್ರಿ ಶಾಸ್ತ್ರಿಯವರ ಮನೆಯು ದೆಹಲಿಯ ಕನ್ನಡಿಗರಿಗೆ ತವರುಮನೆಯಂತಿತ್ತು. ಸಾವಿತ್ರಿಯವರು ಎಲ್ಲರಿಗೂ ತಾಯಿ, ಅಕ್ಕ, ತಂಗಿಯಾಗಿ ಆದರದಿಂದ, ಸ್ವಹಸ್ತದಿಂದ ರುಚಿಕರ ತಿಂಡಿ ತಿನಿಸುಗಳು, ಭೋಜನವನ್ನು ಉಣಬಡಿಸದ ದಿವಸವೇ ಇರಲಿಲ್ಲ. ಅವರ ಮನೆಯಲ್ಲಿ ಉಣದವರೇ ಇರಲಿಲ್ಲ.

ಅವರು ಏಪ್ರಿಲ್ 1934ರಲ್ಲಿ ಕರ್ನಾಟಕದ ಚಿನ್ನದ ಊರಾದ ಕೋಲಾರದಲ್ಲಿ ದೊಡ್ಡ ಮನೆತನದಲ್ಲಿ ಜನ್ಮ ತಾಳಿದರು. ಅವರು ಹಿರಿಯ ಮಗಳಾಗಿ ಸಾಮಾನ್ಯ ಮತ್ತು ಸರಳ ಜೀವನದ ಪರಿಸರದಲ್ಲಿ ಬೆಳೆದರು. ಆ ಕಾಲಕ್ಕೆ ಹೆಣ್ಣು ಮಕ್ಕಳಿಗೆ ಎಷ್ಟು ವಿದ್ಯಾಭ್ಯಾಸದ ಅವಶ್ಯಕತೆಯಿತ್ತೋ ಅಷ್ಟು ಓದಿ, ಗೃಹ ಕಾರ್ಯ, ಒಪ್ಪ ಓರಣೆ, ಅಡಿಗೆ ಮಾಡುವ ಎಲ್ಲಾ ಕಾರ್ಯಗಳನ್ನು ಚಿಕ್ಕ ವಯಸ್ಸಿನಲ್ಲೇ ಕಲಿತರು. ದಂತದ ಗೊಂಬೆಯಂತೆ ಸುಂದರವಾದ ಸ್ತ್ರೀ ಆಗಿದ್ದ ಸಾವಿತ್ರಿಯವರು 1946ನೇ ಇಸವಿಯಲ್ಲಿ ಗೋಪಾಲ ಶಾಸ್ತ್ರೀಯವರನ್ನು ಮದುವೆಯಾದರು. ವಿವಾಹದ ನಂತರ ಅತ್ತೆ ಮಾವಂದಿರೊಂದಿಗೆ ಗಯಾಕ್ಕೆ ಬಂದರು. ಗೋಪಾಲ ಶಾಸ್ತ್ರಿಯವರ ಪೂರ್ವಜರು ಪ್ರಾಯಶಃ ಎರಡು ಶತಕಗಳಿಂದ ಉತ್ತರ ಭಾರತ ತೀರ್ಥಕ್ಷೇತ್ರಗಳಾದ ಕಾಶಿ, ಗಯಾದಲ್ಲಿ ವಲಸೆ ಹೋಗಿ ವಾಸವಾಗಿದ್ದರು. ಮದುವೆಯಾಗಿ ಗಂಡನ ಮನೆಗೆ ಬಂದವರು ಕರ್ನಾಟಕದಲ್ಲಿದ್ದ ತನ್ನ ತವರುಮನೆಗೆ 10 ವರುಷದವರೆಗೂ ಹೋಗಲಿಲ್ಲವಂತೆ.

ಗೋಪಾಲ ಶಾಸ್ತ್ರಿಯವರ ತಂದೆ ತಾಯಿಯರು ತುಂಬಾ ಕಟ್ಟುನಿಟ್ಟಿನ ಸಂಪ್ರದಾಯಸ್ಥರು. ಅಲ್ಲದೆ ಆ ಕಾಲದಲ್ಲಿ ಅದರಲ್ಲೂ ಉತ್ತರ ಭಾರತದಲ್ಲಿ ಸೊಸೆ ಬಂದ ಕೂಡಲೇ ಅತ್ತೆಯು ಅವಳ ಕೈಗೆ ಸಟ್ಟುಗ ಕೊಟ್ಟು ಅತ್ತೆತನ ನಡೆಸುವ ಪ್ರತೀತಿಯಂತೆ. ಈ ವಾತಾವರಣದಲ್ಲಿ ಸಾವಿತ್ರಿಯವರು ಮನೆ, ಗಂಡ, ಅತ್ತೆ, ಮಾವ, ಮಕ್ಕಳು, ಮೊದಲಾದವರ ಜೊತೆಯಲ್ಲಿ ಮನೆಗೆಲಸದಲ್ಲಿ ನಿರತರಾಗಿ ಗೃಹಬಂಧನಕ್ಕೆ ಒಳಗಾಗಿದ್ದರು. ಅವರ ತವರಿನ ಭಾಷೆ ಕನ್ನಡ ಮತ್ತು ಆಡು ಭಾಷೆ ತೆಲುಗು ಆಗಿದ್ದು ಅವರು ಜಾಣರಾಗಿದ್ದರಿಂದ ವ್ಯಾವಹಾರಿಕವಾಗಿ ಮಾತಾಡಲು ಮಗಧಿ, ಹಿಂದಿ, ತಮಿಳು ಕಲಿತು ಸ್ವಪ್ರಯತ್ನದಿಂದ ಗೃಹಕಾರ್ಯದಲ್ಲಿ ಪರಿಣಿತೆಯಾದರು. 28ನೇ ವಯಸ್ಸಿಗೆ ನಾಲ್ಕು ಮಕ್ಕಳ ತಾಯಿಯಾದರು.

ಗೋಪಾಲಶಾಸ್ತ್ರಿಯವರು ಆ ಕಾಲದಲ್ಲಿ ಯುವ ರಾಜಕೀಯ ಪಟುವಾಗಿ, ಡಾ. ರಾಜೇಂದ್ರ ಪ್ರಸಾದ್, ಜಯಪ್ರಕಾಶ ನಾರಾಯಣ್ ಅವರ ಕೈಕೆಳಗೆ ತರಬೇತಿ ಪಡೆದು ಅಖಿಲ ಭಾರತೀಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಭಾರತದ ಅನೇಕ ಜಾಗಗಳಲ್ಲಿ ಯುವಕರ ಕರ್ತವ್ಯ, ದೇಶಭಕ್ತಿ ಮುಂತಾದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ಆ ಕಾಲದಲ್ಲಿ ಅಸ್ಪೃಶ್ಯರನ್ನು ದೇವಸ್ಥಾನದ ಒಳಗೆ ಬಿಡುವ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಸಾಹಸಿಯಾಗಿದ್ದರು. ಅವರ ತಂದೆ ತಾಯಿ ಅವರನ್ನು ಮನೆಯಿಂದ ಹೊರದೂಡಿದರು. ಅದೇ ರೀತಿಯಲ್ಲಿ ಸಾವಿತ್ರಿಯವರು ಕುಲದ ಕಟ್ಟಳೆಗಳ ಹಿತಮಿತವರಿತು, ಹಿರಿಯರ ಸೇವೆ, ಪೂಜೆ ಪುನಸ್ಕಾರ, ದೈವಭಕ್ತಿ ಪತಿಯ ಕಾರ್ಯಗಳಲ್ಲಿ ಸಹಯೋಗ ಮತ್ತು ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ಬೆಳೆಸುವ ಪ್ರಯತ್ನದಲ್ಲಿ ಸಫಲರಾದರು. ಗೋಪಾಲಶಾಸ್ತ್ರಿಯವರು 1956ರಲ್ಲಿ ತಮ್ಮ ರಾಜಕೀಯ ಕಾರ್ಯಕ್ಷೇತ್ರವಾಗಿ ನವದೆಹಲಿಯನ್ನು ಆರಿಸಿಕೊಂಡು ಕುಟುಂಬ ಸಮೇತ ಬಂದರು. 1958ರಿಂದ ಅವರು ಪ್ರಸಿದ್ಧ ಪತ್ರಕರ್ತ ಖುಷವಂತ ಸಿಂಗ್ ಅವರ ತಾತ ಸುಜಾನ್ ಸಿಂಗ್ ಅವರು ಸುಜಾನ್‌ಸಿಂಗ್ ಪಾರ್ಕ್‌ನಲ್ಲಿ ಕಟ್ಟಿದ ಕಟ್ಟಡದಲ್ಲಿ ವಾಸಿಸುತ್ತಿದ್ದಾರೆ.

ಗಯಾ ನಗರದ ಜೀವನಕ್ಕೂ ನವದೆಹಲಿಯ ಸ್ಥರಕ್ಕೂ ಅಜಗಜಾಂತರ ವ್ಯತ್ಯಾಸವಿದ್ದರೂ ಅದಕ್ಕೆಲ್ಲಾ ಹೊಂದಿಕೊಂಡು ಸಾವಿತ್ರಿ ಶಾಸ್ತ್ರಿಯವರು ಪತಿಯ ಸಹಚಾರಿಣಿಯಾಗಿ ರಾಜಕೀಯವನ್ನರಿತುಕೊಂಡು ನೆಹರೂ ಮನೆತನದೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದರು. ಅವರು 1966–1982ರ ವರೆಗೆ ದೆಹಲಿಯಲ್ಲಿ ಮಗಧ ಮಹಿಳಾ ಸಮಿತಿಯ ಅಧ್ಯಕ್ಷೆಯಾಗಿ ಎಲೆಮರೆಕಾಯಿಯಂತೆ ಸೇವೆ ಸಲ್ಲಿಸಿದ್ದಾರೆ. ದೆಹಲಿ ಕನ್ನಡ ವಿದ್ಯಾ ಸಂಸ್ಥೆಯ ಗುದ್ದಲಿ ಪೂಜೆಯಿಂದ ಹಿಡಿದು ಸದಾ ಶಾಲೆಯ ಉನ್ನತಿಗಾಗಿ ಕೆಲಸ ಮಾಡಿದ ಸಾವಿತ್ರಿಯವರು ಆದರ್ಶ ಮಹಿಳೆ. ಆ ಕಾಲದಲ್ಲಿ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ವಿದ್ಯಾಸಂಸ್ಥೆ ಮುಂತಾದ ಕನ್ನಡಿಗರ ಸಂಘ ಸಂಸ್ಥೆಗಳ ಸಮಿತಿಯ ಸಭೆಗಳು ಗೋಪಾಲ ಶಾಸ್ತ್ರಿಯವರ ಮನೆಯಲ್ಲೆ ನಡೆಯುತ್ತಿದ್ದವು. ಅಂತಹ ದಿನಗಳಲ್ಲಿ ಮನೆಗೆ ಬಂದವರ ಊಟ, ತಿಂಡಿ ಇತ್ಯಾದಿ ಸಂಪೂರ್ಣ ನಿರ್ವಹಣೆ ಸಾವಿತ್ರಿಯವರ ಸ್ವಹಸ್ತದಿಂದಲೇ ನಡೆಯುತ್ತಿತ್ತು.

ಸ್ತ್ರೀ ತನ್ನನ್ನು ತಾನು ಗುರುತಿಸಿ ಕೊಂಡು ಒಂದು ಸಮಾಜದಲ್ಲಿ ಪ್ರತಿಷ್ಠಿತಳಾಗಬಹುದು ಎಂಬುದನ್ನು ನಾನು 1969ರಲ್ಲಿಯೇ ಅವರಿಂದ ತಿಳಿದುಕೊಂಡೆ. ಅ

*ಡಾ. ಅಹಲ್ಯಾ ಚಿಂತಾಮಣಿ*




# ದೆಹಲಿಯಲ್ಲಿ ಅಂಬೇಡ್ಕರ್ ಜಯಂತೋತ್ಸವ ಆಚರಣೆ

ದೇಶದಾದ್ಯಂತ ಜಾತಿಗಳ ಮತ್ತು ಧರ್ಮಗಳ ಮಧ್ಯೆ ಭಿನ್ನಾಭಿಪ್ರಾಯ, ಮೀಸಲಾತಿ, ಸಂವಿಧಾನ ತಿದ್ದುಪಡಿ, ದಲಿತರ ಮೇಲೆ ದೌರ್ಜನ್ಯ ನಿರ್ಮೂಲನ ಕಾಯ್ದೆ ಕುರಿತು ಚರ್ಚೆಗಳು ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಕೇವಲ ದಲಿತೋದ್ಧಾರಕ ಎಂದು ತಪ್ಪು ತಿಳುವಳಿಕೆಯಿಂದ ಕೆಲವು ಯುವಕರು ಅವರ ಪುತ್ಥಳಿಗಳಿಗೆ ಬಣ್ಣ ಬಳಿಯುತ್ತಿದ್ದಾರೆ. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಯ ಮೂಲಕ ಅವರು ನೀಡಿದ ಆಡಳಿತ ವ್ಯವಸ್ಥೆಯ ನಾಲ್ಕು ಅಂಗಗಳ ಕರ್ತವ್ಯ, ಜವಾಬ್ದಾರಿ, ಹಕ್ಕು ಪರಿಮಿತಿಯನ್ನು ಶಾಸನ ರೂಪದಲ್ಲಿ ಕಾಣಬಹುದು. ವಿಶ್ವವೇ ಬೆರಗಾಗುವಂತಹ ಅತೀ ದೊಡ್ಡ ಸಂವಿಧಾನವನ್ನು ನೀಡಿದ ಕೀರ್ತಿ ಅವರದ್ದು. ಅವರ ನಿಸ್ವಾರ್ಥ ಸೇವೆ, ಸಮಾಜದಲ್ಲಿದ್ದ ಮೌಢ್ಯ, ತಾರತಮ್ಯ ಅಸ್ಪೃಶ್ಯತೆಯ ನಿರ್ಮೂಲನೆಗೆ ಹೋರಾಟ, ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಸ್ವಾವಲಂಬಿಯಾಗಿ ಬದುಕುವ ಮೂಲಕ ಸಾಮಾಜಿಕ ಸಮಾನತೆಯನ್ನು ಕಾಣಬಹುದು ಎಂದು ಸಾಧಿಸಿ ತೋರಿಸಿದ್ದಾರೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಸರ್ಕಾರಗಳು, ಸರ್ಕಾರೇತರ ಸಂಸ್ಥೆಗಳು, ಸಂಘ ಸಂಸ್ಥೆಗಳು ಅಂಬೇಡ್ಕರ್ ಅವರ ಸಂದೇಶಗಳನ್ನು ಸಾರಿ ಹೇಳತೊಡಗಿವೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರೇ ಡಾ. ಅಂಬೇಡ್ಕರ್ ಅವರ ಜೀವನ, ಸಾಧನೆಗಳನ್ನು ಶ್ಲಾಘಿಸಿ, ಅವರ ಆಶಯಗಳನ್ನು ಸಂರಕ್ಷಿಸುವುದಾಗಿ ಪ್ರಮಾಣ ಮಾಡಿದ್ದಾರೆ.

ರಾಷ್ಟ್ರರಾಜಧಾನಿ ನವದೆಹಲಿಯಲ್ಲಿ ದೆಹಲಿ ಕನ್ನಡಿಗರು ಮತ್ತು ಕನ್ನಡೇತರರಲ್ಲಿ ಭಾವೈಕ್ಯತೆಯನ್ನು ಮೂಡಿಸಿ, ಭ್ರಾತೃತ್ವ ಮತ್ತು ಸಮ ಸಮಾಜದ ನಿರ್ಮಾಣ ಕುರಿತು ಚಿಂತನ ಮಂಥನ ಹಾಗು ಡಾ. ಬಿ.ಆರ್. ಅಂಬೇಡ್ಕರ್ ಅವರ 127ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಫೌಂಡೇಶನ್ ಹಾಗು ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ಸಂಭ್ರಮ ಹಾಗು ಅರ್ಥಪೂರ್ಣವಾಗಿ ಇದೇ ಏಪ್ರಿಲ್ 14ರಂದು ಆಚರಿಸಲಾಯಿತು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯ ಸಾರಿಗೆ ಸಚಿವ ಶ್ರೀ ಹೆಚ್.ಎಂ. ರೇವಣ್ಣ ಮಾತನಾಡಿ, ಸಂವಿಧಾನದ ಮೂಲ ಆಶಯ ಸಮಾಜದಲ್ಲಿ ಸರಿಸಮಾನತೆಯನ್ನು ಕಾಯ್ದುಕೊಂಡು ದೇಶದಲ್ಲಿ ಸಾಮಾಜಿಕವಾಗಿ ಹಿಂದುಳಿದವರು ಆಳುವ ವರ್ಗವಾಗಬೇಕು. ದೀನ ದಲಿತರು, ಶೋಷಿತರು, ಮಹಿಳೆಯರು, ಹಿಂದುಳಿದವರು ಧ್ವನಿ ಇಲ್ಲದವರಿಗೆ ಧ್ವನಿಯಾಗಬೇಕು ಎಂದರು. ಸಮಾಜದಲ್ಲಿ ತಾರತಮ್ಯ ನಿವಾರಣೆಯಾಗಿ ಸರ್ವತೋಮುಖ ಅಭಿವೃದ್ಧಿಯಾಗಬೇಕು. ಶಾಂತಿ ಸುವ್ಯವಸ್ಥೆಯು ನೆಲೆಸಬೇಕು. ದೇಶಕ್ಕೆ ಸಂವಿಧಾನವೇ ಮೂಲ ಆಧಾರ. ಈ ಸಂವಿಧಾನವಿರುವುದರಿಂದಲೇ ತಾವೂ ಸಹ ಇಂದು ಸಚಿವರಾಗಿರುವುದು ಎಂದು ವಿವರಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಎಂದರೆ ಕೇವಲ ದಲಿತರ ಶ್ರೇಯೋದ್ಧಾರಕ ಎನ್ನುವ ತಪ್ಪು ಕಲ್ಪನೆ ಇದೆ. ಈ ತಪ್ಪು ಕಲ್ಪನೆಯನ್ನು ಹೋಗಲಾಡಿಸಬೇಕಿದೆ ಎಂದ ಅವರು ಅಂಬೇಡ್ಕರ್ ಅವರ ಕೊಡುಗೆ ಅಪರಿಮಿತ ಎಂದರು. ಈ ಕಾರ್ಯಕ್ರಮವನ್ನು ದೆಹಲಿಯಲ್ಲಿ ಅರ್ಥಪೂರ್ಣವಾಗಿ ಆಯೋಜಿಸಿದ ಸಂಘಟಕರಿಗೆ ಅಭಿನಂದಿಸಿದ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳನ್ನು ಅಳವಡಿಸಿಕೊಂಡು ಅನುಸರಿಸಬೇಕು ಎಂದು ಕರೆ ನೀಡಿದರು.



ಎಐಎಸಿಟಿಆರ್ ನ ಪ್ರಾಧ್ಯಾಪಕರಾದ ಪ್ರೊ. ನನ್ನೇ ಸಿಂಗ್ ಅವರು ಮಾತನಾಡುತ್ತಾ, ಡಾ. ಅಂಬೇಡ್ಕರ್ ಅವರು ತಳಸಮುದಾಯದಲ್ಲಿ ಹುಟ್ಟಿ ಕಷ್ಟಕಾರ್ಪಣ್ಯಗಳನ್ನು ಎದುರಿಸಿ ಅಂದಿನ ಜಟಿಲ ಜಾತಿ ವ್ಯವಸ್ಥೆಯಲ್ಲೂ ಉನ್ನತ ಶಿಕ್ಷಣ ಪಡೆದು ಅನೇಕ ಪದವಿಗಳನ್ನು ಗಳಿಸಿದ್ದಾರೆ ಎಂದರು. ಡಾ. ಅಂಬೇಡ್ಕರ್ ಅವರು ಉತ್ತಮ ಉದ್ಯೋಗಗಳು ದೊರೆತರೂ ಅದನ್ನು ನಿರಾಕರಿಸಿ ಸಮಾಜ ಹಾಗು ದೇಶಕ್ಕೆ ವಿಶಿಷ್ಠ ಕೊಡುಗೆ ನೀಡಬೇಕು ಹಾಗು ದೇಶದಲ್ಲಿರುವ ತಾರತಮ್ಯವನ್ನು ಹೋಗಲಾಡಿಸಿ ಶಾಶ್ವತವಾದ ಸಮಸಮಾಜವನ್ನು ನಿರ್ಮಿಸಬೇಕು ಎಂದು ದೃಢ ಸಂಕಲ್ಪ ಮಾಡಿ ಎಲ್ಲರ ಏಳಿಗೆ ಶ್ರಮಿಸಿದ್ದಾರೆ ಎಂದು ಪ್ರೊ. ಸಿಂಗ್ ಅವರು ಹೇಳಿದರು. ಕೇವಲ ಒಂದು ಕಾಯ್ದೆಯನ್ನು ರಚಿಸಲು ಎಷ್ಟೆಲ್ಲ ಸಂಕೋಲೆಗಳನ್ನು ಎದುರಿಸಬೇಕಾಗುತ್ತದೆ. ಆದರೆ ಸಂವಿಧಾನವನ್ನು ರಚಿಸಲು ಎಷ್ಟೆಲ್ಲ ಸತ್ವ ಪರೀಕ್ಷೆಗಳು ಎದುರಾದರೂ ಮನಗುಂದದೆ ಅರ್ಥಪೂರ್ಣ ಆಶಯವುಳ್ಳ ರೀತಿಯಲ್ಲಿ ಭಾರತದ ಪವಿತ್ರ ಗ್ರಂಥವಾದ ಸಂವಿಧಾನವನ್ನು ರಚಿಸಿ ಮಹಾನ್ ಕೊಡುಗೆ ನೀಡಿದ್ದಾರೆ ಎಂದು ಅವರು ವಿವರಿಸಿದರು. ಅಂಬೇಡ್ಕರ್ ಅವರ ಮಂತ್ರವಾದ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಕುರಿತು ಶ್ರೀಮತಿ ಶಶಿಕಲಾ ನಾಗರಾಜ್ ಮೈಸೂರು ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಡಾ. ಕೆ.ಪಿ. ಪುತ್ತುರಾಯ ಅವರು ಮಾತನಾಡಿ, ಡಾ. ಅಂಬೇಡ್ಕರ್ ಅವರು ಮಹಾನ್ ವ್ಯಕ್ತಿ ಅವರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸಿರುವುದು ವಿಷಾದನೀಯ ಸಂಗತಿ. ಅವರು ಸಮಾಜದ ಸಮಾನತೆಗಾಗಿ ತಮ್ಮ ಜೀವಮಾನವನ್ನು ಮುಡಿಪಾಗಿಟ್ಟು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿ, ಇಂದಿಗೂ ಪ್ರತಿಯೊಬ್ಬರ ಜೀವನಾಡಿಯಾಗಿದ್ದಾರೆ. ನಾವೆಲ್ಲ ಅವರನ್ನು ಕೇವಲ ಜನ್ಮದಿನಾಚರಣೆಯ ದಿನದಂದು ಮಾತ್ರ ನೆನೆಯದೇ ಅವರ ಆದರ್ಶ ಹಾಗು ಮಾರ್ಗದರ್ಶನಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು. ಕೇವಲ ನಾಟಕೀಯ ಆಚರಣೆಯಾಗಬಾರದು ಕೃತಿಯಲ್ಲಿ ತರಬೇಕು ಎಂದು ತಿಳಿಸುತ್ತಾ, ತಿಳಿ ಹಾಸ್ಯದ ಮೂಲಕ ಸಭಿಕರನ್ನು ರಂಜಿಸಿದರು.

ಇಂದಿರಾ ಗಾಂಧಿ ನ್ಯಾಶನಲ್ ಟ್ರೈಬಲ್ ಯುನಿವರ್ಸಿಟಿಯ ಪ್ರೊ. ಡಾ. ರಾಮ್ ಸಿಂಗರ್ ರಾವ್, ಅಮರಕಂಟಕ, ಇಂದಿರಾ ಗಾಂಧಿ

ಮುಕ್ತ ವಿಶ್ವವಿದ್ಯಾಲಯದ ಪ್ರೊ. ಶಶಿಭೂಷಣ್ ಉಪಾಧ್ಯಾಯ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಬದುಕು, ಬರಹ ಹಾಗು ವಿಚಾರಧಾರೆಗಳನ್ನು ಮಂಡಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಫೌಂಡೇಶನ್ ಅಧ್ಯಕ್ಷ ಬಿ.ಕೆ. ಬಸವರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಫೌಂಡೇಷನ್ ಅಂಬೇಡ್ಕರ್ ಅವರ ಚಿಂತನೆಗಳನ್ನು ಜಾಗೃತಿ ಮೂಡಿಸಲು ಶ್ರಮಿಸುತ್ತದೆ. ಮುಂದಿನ ದಿನಗಳಲ್ಲಿ ಅಂಬೇಡ್ಕರ್ ಅವರ ಜೀವನ ಯಶೋಗಾಥೆಯನ್ನು ವಿಷಯಾಧಾರಿತ ಕಾರ್ಯಕ್ರಮಗಳನ್ನು ದೆಹಲಿಯಲ್ಲಿ ಆಯೋಜಿಸುವ ಮೂಲಕ ಯುವಪೀಳಿಗೆಗೆ ಜಾಗೃತಿ ಮೂಡಿಸಲಿದೆ ಎಂದರು.

ಭಾರತ ಸರ್ಕಾರದ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವರ ಹೆಚ್ಚುವರಿ ಆಪ್ತ ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸ್ ಅವರು ಅಂಬೇಡ್ಕರ್ ಅವರ ಕುರಿತ ಭಾರತ ಭಾಗ್ಯವಿಧಾತ ಕಿರುಚಿತ್ರವನ್ನು ಪ್ರದರ್ಶಿಸಲು ಪ್ರೋತ್ಸಾಹವಿತ್ತರು. ಈ ಕಿರು ಚಿತ್ರವು ಅಂಬೇಡ್ಕರ್ ಅಭಿಮಾನಿಗಳ ಮನಸ್ಸನ್ನು ಸೂರೆಗೊಳಿಸಿತು. ಉಪಾಧ್ಯಕ್ಷರಾದ ಶ್ರೀ ತ್ಯಾಗೇಶ್ ಮೂರ್ತಿ, ಖಜಾಂಚಿಗಳಾದ ಶ್ರೀ ರಾಧಾಕೃಷ್ಣ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿದರು. ಡಾ. ಬಿ.ಆರ್.ಅಂಬೇಡ್ಕರ್ ಸ್ಫೂರ್ತಿ ಫೌಂಡೇಶನ್‌ನ ಕಾರ್ಯದರ್ಶಿ ಶ್ರೀ ಎಸ್. ಕುಮಾರ್ ವಂದಿಸಿದರು. ಡಾ. ಎಂ.ಎಸ್. ಶಶಿಕುಮಾರ್, ಡಾ. ಎಸ್. ಎಲ್. ಭಂಡಾರ್‌ಕರ್, ಡಾ. ರಂಗನಾಥ ಸಿಂಗಾರಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಅ

***ಎಸ್.ಕುಮಾರ್***



## ಇಂಟರ್‌ನ್ಯಾಷನಲ್ ಬಂಟ್ಸ್ ವೆಲ್‌ಫೇರ್ ಟ್ರಸ್ಟ್ ವತಿಯಿಂದ ವಸಂತ ಶೆಟ್ಟಿ ಬೆಳ್ಳಾರೆ ಅವರಿಗೆ ಬಿಸು ಸಮ್ಮಾನ

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರನ್ನು ಇತ್ತೀಚೆಗೆ ಇಂಟರ್‌ನ್ಯಾಷನಲ್ ಬಂಟ್ಸ್ ವೆಲ್‌ಫೇರ್ ಟ್ರಸ್ಟ್ ವತಿಯಿಂದ 'ಬಿಸು-ತುಳುವರ ಯುಗಾದಿ' ವಿಶೇಷ ಗೌರವದೊಂದಿಗೆ ಸನ್ಮಾನಿಸಲಾಯಿತು. ಸದಾಶಯದ ತ್ರೈಮಾಸಿಕದ ಪ್ರಧಾನ ಸಂಪಾದಕ ಭಾಸ್ಕರ ರೈ ಕುಕ್ಕುವಳ್ಳಿ ಅಭಿನಂದನಾ ಭಾಷಣ ಮಾಡಿದರು. 'ಸಂಘ-ಸಂಸ್ಥೆಗಳು ವಿವಿಧ ಸಾಮಾಜಿಕ ಕಾರ್ಯಗಳ ಮೂಲಕ ಗುರುತಿಸಿಕೊಳ್ಳುವುದು ಸಾಮಾನ್ಯ. ಆದರೆ ಪತ್ರಿಕೆ ಮತ್ತು ಸಾಹಿತ್ಯ ಕೃತಿಗಳ ಪ್ರಕಟಣೆಯಿಂದ ಅವು ಶಾಶ್ವತ ನೆಲೆ ಕಂಡುಕೊಳ್ಳುತ್ತವೆ ಎಂದು ವಸಂತ ಶೆಟ್ಟಿ ಬೆಳ್ಳಾರೆ ಅವರು ಈ ಸಂದರ್ಭದಲ್ಲಿ ಹೇಳಿದರು. ಅ

***ಅಭಿಮತ ವರದಿ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770
MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
May-2018, Vol. No.28, Issue No.8, Price Rs.1/-
RNI Regn. No. 53405/91, DL-SW-1/4016/16-18
Date of Publication : May 8th / 9th, Posting Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.















